ವರದಿ ಮಾಡಬಹುದಾಗಿದೆ

**ಭಾರತದ ಸರ್ವೋಚ್ಚ ನ್ಯಾಯಾಲಯ**

**ಸಿವಿಲ್ ಅಪೀಲು ಅಧಿಕಾರವ್ಯಾಪ್ತಿ**

**ಸಿವಿಲ್ ಅಪೀಲು ಸಂಖ್ಯೆ: 73/2023, ದಿನಾಂಕ: 19ನೇ ಜನವರಿ 2023**

**ಮೆ॥ ಆಲ್ಫೈನ್ ಹೌಸಿಂಗ್ ಡೆವಲಪ್ಮೆಂಟ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್**

**ವಿರುದ್ಧ**

**ಅಶೋಕ್ ಎಸ್ ಧಾರಿವಾಲ್ ಮತ್ತು ಇತರರು**

**ತೀರ್ಪು**

**ನ್ಯಾಯಮೂರ್ತಿ ಎಂ. ಆರ್. ಶಾಹ್**

1. ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ: 50799/2019ರಲ್ಲಿ ನೀಡಿದ 01.09.2021ರ ಪ್ರಶ್ನಿತ ತೀರ್ಪು ಹಾಗೂ ಆದೇಶದಲ್ಲಿ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಅಂಗೀಕರಿಸಿ, ಮಾನ್ಯ ಹೆಚ್ಚುವರಿ ನಗರ ವ್ಯವಹರಣೆಗಳ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ನೀಡಿದ ಆದೇಶವನ್ನು ರದ್ದುಗೊಳಿಸಿ ವಜಾ ಮಾಡಿ, ಮಧ್ಯಸ್ಥಿಕೆ ಮತ್ತು ಸಂಧಾನ ಕಾಯಿದೆ, 1996 (ಇಲ್ಲಿಂದ ಮುಂದೆ 'ಕಾಯಿದೆ' ಎಂದು ಉಲ್ಲೇಖಿಸಲಾಗಿದೆ) ರ 34ನೇ ಪ್ರಕರಣದ ಅಡಿಯಲ್ಲಿ ಸಾಕ್ಷ್ಯಾಧಾರವನ್ನು ಮಂಡಿಸಲು ಪ್ರತಿವಾದಿ – ಮೂಲ ರಿಟ್ ಅರ್ಜಿದಾರರಿಗೆ ಅನುಮತಿ ನೀಡಿದ್ದು, ಇದರಿಂದ ಬಾಧಿತಗೊಂಡು ಮತ್ತು ಅಸಮಾಧಾನ ವ್ಯಕ್ತಪಡಿಸಿ ಯಾರ ಪರವಾಗಿ ಮಾನ್ಯ ಮಧ್ಯಸ್ಥಿಕೆ ನ್ಯಾಯಾಧಿಕರಣದಲ್ಲಿ ಐತೀರ್ಪು ನೀಡಲಾಗಿತ್ತೋ ಆ ಮೂಲ ಪ್ರತಿವಾದಿಯು ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

2. ಪ್ರಸ್ತುತ ಅಪೀಲಿಗೆ ಕಾರಣವಾಗುವ ಸಂಗತಿಗಳು ಸಂಕ್ಷಿಪ್ತವಾಗಿ ಈ ಕೆಳಗಿನಂತಿವೆ:

ಮಾನ್ಯ ಮಧ್ಯಸ್ಥಿಕೆದಾರರು ದಿನಾಂಕ: 12.03.1998ರಂದು ನೀಡಿದ ಐತೀರ್ಪಿನ ವಿರುದ್ಧ, ಕಾಯಿದೆಯ ಪ್ರಕರಣ 34ರಡಿಯಲ್ಲಿ ಪ್ರತಿವಾದಿಗಳು ಮಧ್ಯಸ್ಥಿಕೆ ಪ್ರಕರಣ ಸಂಖ್ಯೆ: 38/1998ರ ಅರ್ಜಿಯನ್ನು ಸಲ್ಲಿಸಿದ್ದಾರೆ. ಪ್ರತಿವಾದಿಗಳು ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಪ್ರಕರಣ 34 ರಡಿಯಲ್ಲಿನ ಅರ್ಜಿಯ ಐಎ ಸಂಖ್ಯೆ: 4 ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಹಂತದಲ್ಲಿ, ಮಾನ್ಯ ಮಧ್ಯಸ್ಥಿಕೆದಾರರು ನೀಡಿದ ಐತೀರ್ಪು ಏಕಪಕ್ಷೀಯ ಐತೀರ್ಪಾಗಿತ್ತು ಮತ್ತು ಇಲ್ಲಿ ಪ್ರಕರಣ 34ರ ಅರ್ಜಿಯ ಮೂಲಕ ಐತೀರ್ಪನ್ನು ಟೀಕಿಸಿರುವ ಪ್ರತಿವಾದಿಗಳು ಯಾವುದೇ ಸಾಕ್ಷ್ಯಾಧಾರವನ್ನು ಸಲ್ಲಿಸಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಸದರಿ ಮಧ್ಯಂತರ ಅರ್ಜಿಯು ಮಧ್ಯಸ್ಥಿಕೆ ಕಾಯಿದೆ, 1996ರ ಉಪಬಂಧಗಳಿಗೆ ಅನುಗುಣವಾಗಿ ಊರ್ಜಿತವಾಗುವುದಿಲ್ಲ ಎಂಬ ಆಧಾರದ ಮೇಲೆ ಸಾಕ್ಷ್ಯಾಧಾರಗಳನ್ನು ಸಲ್ಲಿಸಲು ಅನುಮತಿ ಕೋರಿ ಅಪೀಲುದಾರರು ಆ ಮಧ್ಯಂತರ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಇಲ್ಲಿಂದ ಮುಂದೆ ಪ್ರತಿವಾದಿಗಳು ಯಾವ ಆಧಾರದ ಮೇಲೆ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆಂಬುದನ್ನು ನಿರ್ವಹಿಸಿ, ಪರಿಗಣಿಸತಕ್ಕದ್ದು.

2.1. ಒಂದು ವೇಳೆ ಆ ರೀತಿಯಾಗಿ ಅನುಮತಿಯನ್ನು ನೀಡಿದಲ್ಲಿ ಅದು ಮಧ್ಯಸ್ಥಿಕೆ ವ್ಯವಹರಣೆಗಳ ತ್ವರಿತ ವಿಲೆಯ ಆಶಯ ಮತ್ತು ಉದ್ದೇಶಗಳನ್ನು ವಿಫಲಗೊಳಿಸಬಹುದು ಹಾಗೂ 34ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯ ಸುನಾವಣೆಯನ್ನು ಮತ್ತಷ್ಟು ವಿಳಂಬಗೊಳಿಸಬಹುದು ಎಂಬ ಕಾರಣಗಳನ್ನು ನೀಡಿ, 34ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯಲ್ಲಿ ಐ.ಎ. ಸಂಖ್ಯೆ 4 ಮಧ್ಯಂತರ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿರುವ ನ್ಯಾಯಾಲಯವು ಸದರಿ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದೆ ಹಾಗೂ ಪ್ರತಿವಾದಿಗೆ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿಯನ್ನು

ನಿರಾಕರಿಸಿದೆ. ಈ ಉದ್ದೇಶಕ್ಕಾಗಿ, ಪ್ರಕರಣ 34(2)(ಎ) ಯಲ್ಲಿ "ಪುರಾವೆಗಳನ್ನು ಒದಗಿಸುವುದು" ಎಂಬ ಪದಾವಳಿಯನ್ನು "ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲಾತಿಗಳ ಆಧಾರದ ಮೇಲೆ ಸ್ಥಾಪಿಸುವುದು" ಎಂಬ ಪದಾವಳಿಯೊಂದಿಗೆ ಬದಲಾಯಿಸಿ ಮಾಡಲಾದ 2019ರ ತಿದ್ದುಪಡಿಯ ಪ್ರಕಾರ, ಕಾಯಿದೆಯ 34(2)(ಎ) ಪ್ರಕರಣದಲ್ಲಿನ ಉಪಬಂಧಗಳನ್ನು ಅವಲಂಬಿಸಲಾಗಿದೆ. ಆದ್ದರಿಂದ, ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಕಾಯಿದೆಯ 34(2)(ಎ) ಪ್ರಕರಣದ ಅಡಿಯಲ್ಲಿ ಪರಿಗಣಿಸಲಾದಂತೆ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ನ್ಯಾಯಿಕ ಪುನರಾವಲೋಕನೆಯ ವ್ಯಾಪ್ತಿಯನ್ನು ಕಡಿತಗೊಳಿಸುವುದು ಸದರಿ ತಿದ್ದುಪಡಿಯ ಉದ್ದೇಶವಾಗಿದೆ ಹಾಗೂ ಒಂದು ವೇಳೆ ಮಂಡಿಸಲಾಗಿರುವ ಆಧಾರಗಳು ಕಾಯಿದೆಯ 34(2)(ಎ) ಪ್ರಕರಣಕ್ಕೆ ಸಂಬಂಧಿಸಿದ್ದರೂ ಸಹ, ಅರ್ಜಿದಾರರಿಗೆ ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸುವ ಯಾವುದೇ ಹಕ್ಕು ಇರುವುದಿಲ್ಲ ಎಂದು 34ನೇ ಪ್ರಕರಣದ ಅರ್ಜಿಯ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆ. ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಸಲ್ಲಿಸಲು ಅನುಮತಿ ನೀಡಿ, ಪ್ರತಿವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 4ನ್ನು ವಜಾಗೊಳಿಸಿರುವ 34ನೇ ಪ್ರಕರಣದ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿರುವ ನ್ಯಾಯಾಲಯವು ಹೊರಡಿಸಿದ ಆದೇಶವು ಉಚ್ಚ ನ್ಯಾಯಾಲಯದ ಮುಂದಿಟ್ಟಿದ್ದ ರಿಟ್ ಅರ್ಜಿಯ ವಸ್ತು– ವಿಷಯವಾಗಿತ್ತು.

2.2. 34(2)(ಎ) ಪ್ರಕರಣದ ಉಪಬಂಧಗಳು, ಅವು 2019 ರ ಅಧಿನಿಯಮ 33ಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿದ್ದುದರಿಂದ, ಕಾಯಿದೆಯ ಪ್ರಕರಣ 34(2)(ಎ) ಗೆ ಪೂರ್ವ ತಿದ್ದುಪಡಿ ಎಂಬುದು ಅನ್ವಯವಾಗತಕ್ಕದ್ದು ಎಂಬುದಾಗಿ ಪ್ರಶ್ನಿತ ತೀರ್ಪಿನ ಖಂಡಿಕೆ 8 ರಲ್ಲಿ ದಾಖಲಿಸಿದಂತೆ,

ಇಲ್ಲಿನ ಅಪೀಲುದಾರ – ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಿದ್ದ ಮೂಲ ಪ್ರತಿವಾದಿಯ ಪರವಾಗಿ ಉಚ್ಚ ನ್ಯಾಯಾಲಯದ ಮುಂದೆ ಒಪ್ಪಿಕೊಳ್ಳಲಾಗಿತ್ತು. ಆನಂತರ, ಪ್ರಶ್ನಿತ ತೀರ್ಪು ಹಾಗೂ ಆದೇಶದ ಮೂಲಕ, (2019) 17 ಎಸ್‌ಸಿಸಿ 796 ಇದರಲ್ಲಿ ವರದಿಯಾಗಿರುವ ***ಫಿಜಾ ಡೆವಲಪರ್ಸ್ ಅ್ಯಂಡ್ ಇಂಟರ್ ಟ್ರೇಡ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಎಎಂಸಿಐ (ಇಂಡಿಯಾ) & ಮತ್ತೊಬ್ಬರು*** ಪ್ರಕರಣದ ನಿರ್ಣಯವನ್ನು ಅನುಸರಿಸಿಕೊಂಡು, ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಅಂಗೀಕರಿಸಿ, ಅಧೀನ ನ್ಯಾಯಾಲಯವು ಹೊರಡಿಸಿದ್ದ ಆದೇಶವನ್ನು ವಜಾಗೊಳಿಸಿದೆ ಹಾಗೂ ಕಾಯಿದೆಯ 34ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಲ್ಲಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ನೀಡಿ, ಇದರಲ್ಲಿನ ಪ್ರತಿವಾದಿಗಳು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದೆ. ಕಾಯಿದೆಯ 34ನೇ ಪ್ರಕರಣದ ಅಡಿಯಲ್ಲಿನ ನಡವಳಿಗಳಲ್ಲಿ ಸಾಕ್ಷ್ಯಾಧಾರಗಳನ್ನು/ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಪ್ರತಿವಾದಿಗಳಿಗೆ ಅನುಮತಿ ನೀಡಿ ಉಚ್ಚ ನ್ಯಾಯಾಲಯವು ಹೊರಡಿಸಿದ್ದ ಪ್ರಶ್ನಿತ ತೀರ್ಪು ಹಾಗೂ ಆದೇಶಗಳು ಪ್ರಸ್ತುತ ಈ ನ್ಯಾಯಾಲಯದ ಮುಂದಿರುವ ಅಪೀಲಿನ ವಸ್ತು–ವಿಷಯವಾಗಿದೆ.

3. ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಶ್ರೀ ಕೃಷ್ಣನ್ ವೇಣುಗೋಪಾಲ್ ಮತ್ತು ಪ್ರತಿವಾದಿಗಳು – ಮೂಲ ರಿಟ್ ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಶ್ರೀ ಬಾಲಾಜಿ ಶ್ರೀನಿವಾಸನ್ ಹಾಜರಾಗಿರುತ್ತಾರೆ.

3.1. ಶ್ರೀ ಕೃಷ್ಣನ್ ವೇಣುಗೋಪಾಲ್, ಅಪೀಲುದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರು, ಪ್ರಕರಣದ ವಾಸ್ತವಾಂಶಗಳು ಮತ್ತು ಸನ್ನಿವೇಶಗಳಲ್ಲಿ ಉಚ್ಚ ನ್ಯಾಯಾಲಯವು

ಕಾಯಿದೆಯ ಪ್ರಕರಣ 34ರಡಿಯಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಪ್ರತಿವಾದಿಗಳಿಗೆ ಅವಕಾಶ ನೀಡುವಲ್ಲಿ ಗಂಭೀರ ಪ್ರಮಾದವನ್ನು ಎಸಗಿದೆ ಎಂದು ವಾದಿಸಿದ್ದಾರೆ. ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯಲ್ಲಿ, ಪ್ರತಿವಾದಿಗಳಿಗೆ ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ನೀಡಿ ಉಚ್ಚ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ತೀರ್ಪು ಹಾಗೂ ಆದೇಶಗಳು ಕಾಯಿದೆ ಸಂಖ್ಯೆ: 33/2019ರಲ್ಲಿ ಕಂಡಂತೆ ತಿದ್ದುಪಡಿಗೆ ಒಳಪಟ್ಟ ಪ್ರಕರಣ 34(2)(ಎ) ಇದರ ಆಶಯ ಹಾಗೂ ಉದ್ದೇಶಗಳಿಗೆ ವಿರುದ್ಧವಾಗಿದೆ ಎಂದು ಮಂಡಿಸಲಾಗಿದೆ. ಒಂದು ವೇಳೆ ಕಾಯಿದೆಯ 34ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿರುವ ಒಂದು ಅರ್ಜಿಯಲ್ಲಿ ಮಧ್ಯಸ್ಥಿಕೆ ನ್ಯಾಯಾಧಿಕರಣವು ನೀಡಿದ ಐತೀರ್ಪಿನಿಂದ ಬಾಧಿತರಾಗಿರುವ ಅರ್ಜಿದಾರರು ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ನೀಡಿದರೆ, ಕಾಯಿದೆಯ 34(2)(ಎ) ಪ್ರಕರಣದಲ್ಲಿ "ಪುರಾವೆಗಳನ್ನು ಒದಗಿಸುವುದು" ಎಂಬ ಪದಾವಳಿಯನ್ನು "ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲಾತಿಗಳ ಆಧಾರದ ಮೇಲೆ ಸ್ಥಾಪಿಸುವುದು" ಎಂಬ ಪದಾವಳಿಯೊಂದಿಗೆ ಬದಲಾಯಿಸಿ ಮಾಡಲಾದ ತಿದ್ದುಪಡಿಯ ಆಶಯ ಹಾಗೂ ಉದ್ದೇಶವನ್ನು ವಿಫಲಗೊಳಿಸುತ್ತದೆ ಎಂದು ವಾದಿಸಲಾಗಿದೆ. ಕಾಯಿದೆಯ 34(2)(ಎ) ಪ್ರಕರಣಕ್ಕೆ ಮಾಡಿರುವ ತಿದ್ದುಪಡಿಯ ಆಶಯ ಹಾಗೂ ಉದ್ದೇಶಗಳು ಮಧ್ಯಸ್ಥಿಕೆ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ತ್ವರಿತಗತಿಯಲ್ಲಿ ನಿರ್ಣಯ ಹಾಗೂ ವಿಲೇವಾರಿ ಮಾಡುವುದು ಮತ್ತು ವಿಳಂಬವನ್ನು ತಪ್ಪಿಸುವುದಾಗಿದೆ ಎಂದು ಮಂಡಿಸಲಾಗಿದೆ.

3.2. ಶ್ರೀ ಕೃಷ್ಣನ್ ವೇಣುಗೋಪಾಲ್, ಅಪೀಲುದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರು, ಪ್ರಕರಣ 34(2)(ಎ)ಯ ತಿದ್ದುಪಡಿಗೆ ಒಳಗಾಗುವುದಕ್ಕಿಂತ ಮುನ್ನ ಅಸ್ತಿತ್ವದಲ್ಲಿದ್ದ

ಪೂರ್ವ ತಿದ್ದುಪಡಿಯ ಕಾಯಿದೆಯ 34ನೇ ಪ್ರಕರಣವು ಅನ್ವಯವಾಗತಕ್ಕದ್ದು ಎಂಬುದಾಗಿ ಅಪೀಲುದಾರರ ಪರವಾಗಿ ಹಾಜರಾಗಿದ್ದ ವಕೀಲರು ಉಚ್ಚ ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದರೂ ಸಹ, ಸದರಿ ಒಪ್ಪಿಕೊಳ್ಳುವಿಕೆಯು ಅವರ ಬದ್ಧತೆಗೆ ಒಳಪಡುವುದಿಲ್ಲ ಏಕೆಂದರೆ ಅದು ಕಾನೂನಿಗೆ ವಿರುದ್ಧವಾಗಿರುತ್ತದೆ ಮತ್ತು ಕಾನೂನಿಗೆ ವಿರುದ್ಧವಾದ ಯಾವುದೇ ಒಪ್ಪಿಕೊಳ್ಳುವಿಕೆಯು ಬದ್ಧತೆಗೆ ಒಳಪಡತಕ್ಕದಲ್ಲ ಎಂದು ಮುಂದುವರೆದು ಮಂಡಿಸಿರುತ್ತಾರೆ. ಆದ್ದರಿಂದ ಅವರ ಪ್ರಕಾರ ಪ್ರಕರಣ 34(2)(ಎ)ಯ ತಿದ್ದುಪಡಿಯ ನಂತರದ ಉಪಬಂಧಗಳು ಅನ್ವಯವಾಗತಕ್ಕದ್ದು, ಅಂದರೆ ಇದರ ಮೂಲಕ ಕಾಯಿದೆಯ ಪ್ರಕರಣ 34(2)(ಎ)ಯಲ್ಲಿ ವಿವರಿಸಿರುವ ಆಧಾರಗಳ ಮೇಲೆ ಐತೀರ್ಪನ್ನು ವಜಾಗೊಳಿಸುವುದಕ್ಕಾಗಿ ಅರ್ಜಿದಾರರು ಪುರಾವೆಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ ಮತ್ತು ಪ್ರಕರಣ 34ರ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿರುವ ನ್ಯಾಯಾಲಯವು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪ್ರಕರಣ 34(2)(ಎ)ಯ ಅಡಿಯಲ್ಲಿ ಪರಿಗಣಿಸಲಾದ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಅದನ್ನು ನಿರ್ಧರಿಸಬೇಕಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಸಾಕ್ಷ್ಯಾಧಾರಗಳು/ ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸುವ ಹಕ್ಕನ್ನು ಹೊಂದಿರಲು ಸಾಧ್ಯವಿರುವುದಿಲ್ಲ ಎಂದು ಮಂಡಿಸಲಾಗಿದೆ.

3.3. ಅದಲ್ಲದೆಯೂ, ಮತ್ತು ತಿದ್ದುಪಡಿಗೆ ಮುಂಚಿತವಾಗಿ ಅನ್ವಯವಾಗುವ ಉಪಬಂಧಗಳು (2019 ರ ಕಾಯಿದೆ 33) ಅನ್ವಯವಾಗುತ್ತವೆ ಎಂದು ಭಾವಿಸಿ, ಆ ಸಂದರ್ಭದಲ್ಲಿಯೂ ಸಹ ಪ್ರತಿವಾದಿಗಳು – ಮೂಲ ಅರ್ಜಿದಾರರು ಕಾಯಿದೆಯ ಪ್ರಕರಣ 34(2)(ಬಿ)ಯ ಅಡಿಯಲ್ಲಿ ಪರಿಗಣಿಸಲಾದ ಆಧಾರಗಳ ಮೇಲೆ ನೀಡಿದ ಐತೀರ್ಪನ್ನು ಆಕ್ಷೇಪಿಸಿರುವುದರಿಂದ, ಪ್ರಕರಣ 34(2)(ಎ)ಯಲ್ಲಿನ "ಪುರಾವೆಯನ್ನು ಒದಗಿಸುವುದು" ಎಂಬ ಪದಾವಳಿಯು ಪ್ರಕರಣ 34(2)(ಬಿ)ಗೆ ಅನ್ವಯಿಸಲು

ಸಾಧ್ಯವಿರುವುದಿಲ್ಲ. ಮಧ್ಯಸ್ಥಿಕೆ ನ್ಯಾಯಾಧಿಕರಣ ನೀಡಿದ ಐತೀರ್ಪನ್ನು ಪ್ರಕರಣ 34(2)(ಎ) ಅಥವಾ 34(2)(ಬಿ)ಯ ಅಡಿಯಲ್ಲಿ ಪರಿಗಣಿಸಲಾದ ಆಧಾರದ ಮೇಲೆ ಆಕ್ಷೇಪಿಸಬಹುದು ಎಂದು ಮುಂದುವರೆದು ಮಂಡಿಸಲಾಗಿದೆ. ಪ್ರಕರಣ 34(2)(ಎ) ಮತ್ತು ಪ್ರಕರಣ 34(2)(ಬಿ)ಯ ಅಡಿಯಲ್ಲಿ ಪರಿಗಣಿಸಲಾದ ಆಧಾರಗಳು ಪ್ರತ್ಯೇಕ ಆಧಾರಗಳು/ ಖಂಡಗಳು ಎಂದು ಮಂಡಿಸಲಾಗಿದೆ. ಕಾಯಿದೆಯ ಪ್ರಕರಣ 34(2)(ಎ)ಯಲ್ಲಿ "ಪುರಾವೆಗಳನ್ನು ಒದಗಿಸುವುದು" ಎಂಬ ಪದಾವಳಿಯನ್ನು ಪ್ರಕರಣ 34(2)(ಬಿ)ಗೆ ಅನ್ವಯಿಸಲು ಸಾಧ್ಯವಿಲ್ಲ ಎಂದು ಮಂಡಿಸಲಾಗಿದೆ, ಏಕೆಂದರೆ ಸಂಸತ್ತು ಉದ್ದೇಶಿಸಿದ್ದರೆ, ಪ್ರಕರಣ 34(2) ರಲ್ಲಿನ ಎಲ್ಲಾ ಏಳು ಆಧಾರಗಳಿಗೆ (ಎ) ಮತ್ತು (ಬಿ) ಗಳ ಪ್ರತ್ಯೇಕ ಖಂಡಗಳ ಅಗತ್ಯದ ಹೊರತಾಗಿಯೂ ಪುರಾವೆಗಳ ಅಗತ್ಯತೆಯನ್ನು ಅನ್ವಯಿಸಬಹುದಾಗಿತ್ತು. ಪ್ರಕರಣ 34(2)(ಬಿ) ಯಲ್ಲಿ "ನ್ಯಾಯಾಲಯಕ್ಕೆ....ಕಂಡು ಬಂದಿದೆ" ಎಂಬ ಪದಾವಳಿಯ ತಾತ್ಪರ್ಯವೇನೆಂದರೆ ನ್ಯಾಯಾಲಯವು ಮಧ್ಯಸ್ಥಿಕೆ ಐತೀರ್ಪಿನ ಆಧಾರದ ಮೇಲೆ ವಿವಾದವು ಮಧ್ಯಸ್ಥಿಕೆಗೆ ಒಳಪಡುವುದಿಲ್ಲ ಅಥವಾ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂದು ಸ್ವತಃ ನಿರ್ಧರಿಸಬಹುದು. ಆದ್ದರಿಂದ ಪ್ರಕರಣ 34(2)ರ (ಎ) ಮತ್ತು (ಬಿ) ಖಂಡಗಳ ನಡುವಿನ ವಿಯೋಜಕವಾಚಿಯಾದ "ಅಥವಾ"ವನ್ನು ಸಂಯೋಜಕವಾಚಿಯಾದ "ಮತ್ತು" ಎಂದು ಓದುವಂತಿಲ್ಲ ಎಂದು ಮಂಡಿಸಲಾಗಿದೆ.

3.4. ***ಮೇಲೆ ಹೇಳಿರುವ ಫಿಜಾ ಡೆವಲಪರ್ಸ್*** ಪ್ರಕರಣದಲ್ಲಿ ಈ ನ್ಯಾಯಾಲಯದ ಕಾರಣಗಳು ವಿವಾದಾಂಶಗಳನ್ನು ರೂಪಿಸುವುದಕ್ಕಾಗಿದ್ದು, ಅವು ಪ್ರಕರಣ 34(2)ರ ವ್ಯವಹರಣೆಗಳಿಗೆ ಅಗತ್ಯವಿಲ್ಲವೆಂದು ಮುಂದುವರೆದು ಮಂಡಿಸಲಾಗಿದೆ. ***(2018) 9 ಎಸ್‌ಸಿಸಿ 49ರಲ್ಲಿ ವರದಿ ಮಾಡಲಾಗಿರುವ ಎಂಕೆ ಗ್ಲೋಬಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ವಿರುದ್ಧ ಗಿರ್ಧರ್***

***ಸೋಂಧಿ*** ಪ್ರಕರಣದಲ್ಲಿ, ಈ ನ್ಯಾಯಾಲಯವು ***ಮೇಲ್ಕಂಡ ಫಿಜಾ ಡೆವಲಪರ್ಸ್*** ಪ್ರಕರಣದಲ್ಲಿ ನೀಡಿರುವ ನಿರ್ಣಯವನ್ನು ವಿವರಿಸಿದ್ದು, ಪ್ರಕರಣ 34(2)(ಎ)ಯಲ್ಲಿ ಮಾತ್ರ ಪುರಾವೆಯನ್ನು ಒದಗಿಸಲು ಆಲೋಚಿಸಬೇಕಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆ. ***(2019) 9 ಎಸ್‌ಸಿಸಿ 462ರಲ್ಲಿ ವರದಿ ಮಾಡಿದ ಕೆನರಾ ನಿಧಿ ಲಿಮಿಟೆಡ್ ವಿರುದ್ಧ ಶಶಿಕಲಾ*** ಪ್ರಕರಣದಲ್ಲಿ ಈ ನ್ಯಾಯಾಲಯದ ತರುವಾಯದ ನಿರ್ಣಯವು **ಮೇಲಿನ ಎಂಕೆ ಗ್ಲೋಬಲ್** ಪ್ರಕರಣದಲ್ಲಿ ಪ್ರಕರಣ 34(2)(ಎ)ಯ ವ್ಯಾಖ್ಯಾನವನ್ನು ಅನುಮೋದಿಸಿದೆ ಎಂದು ಮಂಡಿಸಲಾಗಿದೆ.

3.5 ***(2022) 1 ಎಸ್‌ಸಿಸಿ 753ರಲ್ಲಿ ವರದಿಗೊಂಡ ಜೆಮಿನಿ ಬೇ ಟ್ರಾನ್ಸ್ಕ್ರಿಪ್ಷನ್ ಪ್ರೈವೆಟ್ ಲಿಮಿಟೆಡ್ ವಿರುದ್ಧ ಇಂಟಿಗ್ರೇಟೆಡ್ ಸೇಲ್ಸ್ ಸರ್ವೀಸ್ ಲಿಮಿಟೆಡ್*** ಪ್ರಕರಣದಲ್ಲಿ ಈ ನ್ಯಾಯಾಲಯವು ಪ್ರಕರಣ 34(2)(ಎ)ಗೆ ಮಾಡಲಾದ 2019ರ ತಿದ್ದುಪಡಿಯನ್ನು ಸ್ಪಷ್ಟೀಕರಣದಾಯಕವಾಗಿ ಪರಿಗಣಿಸಿದ್ದು, ಪ್ರಕರಣ 34(2)(ಎ) ಮತ್ತು 34(2)(ಬಿ)ಗೆ ಸಮವಿಷಯವಾಗಿರುವ ಪ್ರಕರಣ 48(1)ನ್ನು ಪರಿಗಣಿಸುವಾಗ ಅವು 2019ರ ತಿದ್ದುಪಡಿಗಿಂತ ಮೊದಲೇ ಆದವುಗಳು ಎಂದು ಪರಿಗಣಿಸಲಾಗಿದೆ. ಖಂಡಿಕೆ 39 ಮತ್ತು 40ರಲ್ಲಿನ ಮೇಲಿನ ನಿರ್ಣಯದಲ್ಲಿ ಈ ನ್ಯಾಯಾಲಯವು ಪ್ರಕರಣ 48 (2)ರಲ್ಲಿ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷವನ್ನು ಒಳಗೊಂಡಂತೆ ತಿದ್ದುಪಡಿ ಮಾಡದ ಪ್ರಕರಣ 48ರ ಅಡಿಯಲ್ಲಿ ವಿದೇಶಿ ಐತೀರ್ಪಿನ ತ್ವರಿತ ಜಾರಿಯ ಹಿತದೃಷ್ಟಿಯಿಂದ ಮಾತ್ರ "ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲೆ" ಯ ಆಧಾರದ ಮೇಲೆ ಸ್ಥಾಪಿಸಬೇಕು ಎಂದು ಹೇಳಿದೆ.

3.6 ಒಂದು ವ್ಯವಹರಣೆಯಲ್ಲಿ ಎರಡು ವಿಭಿನ್ನ ಆಧಾರಗಳಿಗಾಗಿ ಎರಡು ವಿಭಿನ್ನ ಕಾರ್ಯವಿಧಾನಗಳನ್ನು ಒದಗಿಸಲು ಅಥವಾ ಒಂದೇ ಪರಿಹಾರಕ್ಕಾಗಿ ಎರಡು ವಿಭಿನ್ನ

ಕಾರ್ಯವಿಧಾನಗಳನ್ನು ಹೊಂದಲು ಸಂಸತ್ತಿಗೆ ಯಾವುದೇ ಕಾನೂನು ನಿರ್ಬಂಧ ಇಲ್ಲ ಎಂದು ಮಂಡಿಸಲಾಗಿದೆ. ಪ್ರಕರಣ 34(2)(ಬಿ)ಯಲ್ಲಿನ ಆಧಾರಗಳನ್ನು ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲೆಯ ಆಧಾರದ ಮೇಲೆ ಸ್ಥಾಪಿಸಬೇಕು ಎಂದು ಸಂಸತ್ತು ಉದ್ದೇಶಿಸಿದೆ ಎಂದು ಮಂಡಿಸಲಾಗಿದೆ. ಪ್ರಕರಣ 34(2)(ಬಿ)ಯ ಅಡಿಯಲ್ಲಿ ಪುರಾವೆಯ ಅಗತ್ಯವಿರುತ್ತದೆ ಎಂದು ಭಾವಿಸಿದರೂ ಸಹ, ಅದು ಶಾಸನದ ಜೊತೆಗೆ ಐತೀರ್ಪಿನ ಆಪಾದಿತ ಸಂಘರ್ಷವನ್ನು ಒಳಗೊಂಡಿರುವ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ಮಂಡಿಸಲಾಗಿದೆ. ಕಾನೂನಿನ ಪ್ರಶ್ನೆ ಮಾತ್ರವಾಗಿ ಇದನ್ನು ತೀರ್ಪಿನಲ್ಲಿ ದಾಖಲಿಸಲಾದ ನಿರ್ಣಯಗಳ/ ನಿರ್ದೇಶನಗಳ ಮೇಲೆ ಪರಿಗಣಿಸಬಹುದು.

3.7 ಅರ್ಹತೆಗಳ ಆಧಾರದ ಮೇಲೆಯೂ ಕೂಡ, ಅಸಾಧಾರಣ ಸಂದರ್ಭಗಳನ್ನು ಹೊರತು ಪಡಿಸಿ, ಯಾವುದೇ ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಅನುಮತಿಸಲಾಗುವುದಿಲ್ಲ ಎಂಬುದು ಸಾಮಾನ್ಯ ನಿಯಮವಾಗಿದೆ ಎಂದು ಮುಂದುವರೆದು ಮಂಡಿಸಲಾಗಿದೆ. ಪ್ರಸ್ತುತ ಪ್ರಕರಣವು ***ಮೇಲೆ ಹೇಳಿರುವ ಕೆನರಾ ನಿಧಿ*** ಪ್ರಕರಣದಲ್ಲಿ ಈ ನ್ಯಾಯಾಲಯವು ಎತ್ತಿ ಹಿಡಿದಿರುವ “ಅಸಾಧಾರಣ ಸಂದರ್ಭಗಳು” ಎಂಬ ಅರ್ಥದೊಳಗೆ ಬರುವುದಿಲ್ಲ ಎಂದು ಮಂಡಿಸಲಾಗಿದೆ. ಪಕ್ಷಕಾರರು ಶಾಸನಬದ್ಧ ಅನುಮತಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಎಂಬ ಐತೀರ್ಪಿನಲ್ಲಿರುವ ನಿರ್ದೇಶನಗಳು ನಿರ್ದಿಷ್ಟ ಕಾರ್ಯಕ್ಷಮತೆಗಾಗಿ ಇರುವ ದಾವೆಗಳಲ್ಲಿ ನೀಡಬೇಕಾಗಿರುವ ಕಾನೂನುಬದ್ಧವಾದ ಸರಿಯಾದ ಡಿಕ್ರಿಯಾಗಿದೆ ಎಂದು ಮಂಡಿಸಲಾಗಿದೆ. ಆದ್ದರಿಂದ, ಈ ಐತೀರ್ಪು “ಭಾರತೀಯ ಕಾನೂನಿನ ಸಾರ್ವಜನಿಕ ನೀತಿ”ಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂದು ಹೇಳಲು ಸಾಧ್ಯವಿಲ್ಲ.

3.8 ಐತೀರ್ಪನ್ನು ಜಾರಿಗೆ ತರಲು ಆಧಾರವಾಗಿರುವ ಖಾತಾಗಳನ್ನು ಒಗ್ಗೂಡಿಸಲು ನಿಗಮವು ಅನುಮತಿಯನ್ನು ನಿರಾಕರಿಸಿರುವುದರಿಂದ ಈ ಐತೀರ್ಪು ವಿಫಲಗೊಂಡಿದೆ ಎಂಬ ಪ್ರತಿವಾದಿಗಳ ವಾದವು ಪ್ರಕರಣ 34(2)(ಬಿ) ಯ ಅಡಿಯಲ್ಲಿ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷ ಎಂಬ ಆಧಾರ ಮಿತಿಯೊಳಗೆ ಒಳಪಡುವುದಿಲ್ಲ. ಏಕೆಂದರೆ ಭಾರತದ ಸಾರ್ವಜನಿಕ ನೀತಿಯೊಂದಿಗೆ ಐತೀರ್ಪಿನ ಜಾರಿಗೊಳಿಸುವಿಕೆಯು ಸಂಘರ್ಷಕ್ಕೆ ಒಳಪಡಬೇಕೆ ಹೊರತು ಸ್ವತಃ ಐತೀರ್ಪು ಸಂಘರ್ಷಕ್ಕೆ ಒಳಪಡುವಂತಿಲ್ಲ ಎಂದು ಮಂಡಿಸಲಾಗಿದೆ. ಪ್ರತಿವಾದಿಯ ವಾದವು ಅವನು ಐತೀರ್ಪನ್ನು ಸ್ವೀಕರಿಸುವುದರ ಮೇಲೆ ಆಧಾರಿತವಾಗಿದೆ ಎಂಬ ವಾಸ್ತವಾಂಶದ ಹೊರತಾಗಿ, ನಿಗಮದ ಆರೋಪಿತ ನಿರಾಕರಣೆಯು ನಿಸ್ಸಂಶಯವಾಗಿ ಐತೀರ್ಪು ನೀಡಿದ ತರುವಾಯದ ಘಟನೆಯಾಗಿದೆ ಎಂದು ಮಂಡಿಸಲಾಗಿದೆ. ಪರಿಸ್ಥಿತಿಯ ಬದಲಾವಣೆಯಿಂದಾಗಿ ಡಿಕ್ರಿಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಅಮಲ್ಜಾರಿ ನ್ಯಾಯಾಲಯವೇ ನಿರ್ಧರಿಸುತ್ತದೆ ಎಂದು ಮಂಡಿಸಲಾಗಿದೆ. ಜಾರಿಗೊಳಿಸುವ ಸಮಯದಲ್ಲಿ ಸಾಕ್ಷ್ಯಾಧಾರಗಳನ್ನು ಮಂಡಿಸಬಹುದು ಎಂದು ಮಂಡಿಸಲಾಗಿದೆ. ಪ್ರತಿವಾದಿಗಳು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಗೆ ಸಲ್ಲಿಸಿದ್ದ ತಮ್ಮ ಆಕ್ಷೇಪವು ತಿರಸ್ಕೃತವಾದ ನಂತರ ಮಧ್ಯಸ್ಥಿಕೆ ವ್ಯವಹರಣೆಗಳಲ್ಲಿ ಭಾಗವಹಿಸಿದ್ದರೂ ಸಹ, ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದೆ ಅವರು ಸ್ವ–ಇಚ್ಛೆಯಿಂದ ಭಾಗವಹಿಸಲು ವಿಫಲರಾಗಿದ್ದುದರ ಪರಿಣಾಮವನ್ನು ಅನುಭವಿಸಲು ಬದ್ಧರಾಗಿದ್ದಾರೆ ಎಂದು ಮಂಡಿಸಲಾಗಿದೆ. ಆದ್ದರಿಂದ ಪ್ರತಿವಾದಿಗಳು ತಮ್ಮ ಸ್ವಂತ ತಪ್ಪುಗಳ ಲಾಭವನ್ನು ಪಡೆದುಕೊಳ್ಳುವ ಮೂಲಕ ಸಾಕ್ಷ್ಯಾಧಾರಗಳನ್ನು ಮಂಡಿಸಲು ಅನುಮತಿಸಲು ಸಾಧ್ಯವಿಲ್ಲ ಎಂದು ಮಂಡಿಸಲಾಗಿದೆ.

3.9 ಪ್ರತಿವಾದಿಗಳಿಗೆ ಸಾಕ್ಷ್ಯವನ್ನು ಒದಗಿಸಲು ಈ ನ್ಯಾಯಾಲಯವು ಅನುಕೂಲ ಮಾಡಿಕೊಟ್ಟರೆ, ಅಂತಹ ಸಂದರ್ಭದಲ್ಲಿ, (ಎ) ನಾಲೆಗಳು ಇರುವಲ್ಲಿಯ ಖಾತಾಗಳನ್ನು ಒಗ್ಗೂಡಿಸಲು ಅನುಮತಿ ನೀಡಲು ಮತ್ತು 28–06–2004ರಂದು ನಿಗಮವು ತರುವಾಯದಲ್ಲಿ ನೀಡಿದ ಅನುಮೋದನೆಯು ಪ್ರತಿವಾದಿಗಳು ಮುಚ್ಚಿಟ್ಟಿದ್ದ ಖಾತಾಗಳನ್ನು ಒಗ್ಗೂಡಿಸುವುದನ್ನು ಪರಿಗಣಿಸಲು ಅಂಗೀಕರಿಸುವುದಕ್ಕಾಗಿ ಸಾಕ್ಷ್ಯವನ್ನು ಒದಗಿಸಲು ಅಪೀಲುದಾರನಿಗೆ ಅನುಮತಿ ನೀಡಬಹುದಾಗಿದೆ ಮತ್ತು, (ಬಿ) ನಿಗಮದ ನಿರಾಕರಣೆಯು 34(2)(ಬಿ) ಪ್ರಕರಣದ ಅಡಿಯಲ್ಲಿ ಬರುತ್ತದೆಯೇ ಎಂಬ ಕಾನೂನಿನ ಪ್ರಶ್ನೆಗಳನ್ನು ತೆರೆದಿಟ್ಟುಕೊಳ್ಳಬಹುದಾಗಿದೆ ಎಂದು ಅಪೀಲುದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರು ವಾದಿಸಿದ್ದಾರೆ.

4. ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಶ್ರೀ ಬಾಲಾಜಿ ಶ್ರೀನಿವಾಸನ್ ಅವರು ಪ್ರಸ್ತುತ ಅಪೀಲನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಪ್ರಸ್ತುತ ಪ್ರಕರಣದಲ್ಲಿ ಆರಂಭದಲ್ಲಿ ಪ್ರತಿವಾದಿಗಳು ಮಧ್ಯಸ್ಥಿಕೆ ವ್ಯವಹರಣೆಗಳು/ ಮಧ್ಯಸ್ಥಿಕೆ ನ್ಯಾಯಾಧಿಕರಣದ ರಚನೆಯನ್ನು ಪ್ರಶ್ನಿಸಿದ್ದರು, ಆದ್ದರಿಂದ ಮಧ್ಯಸ್ಥಿಕೆ ವ್ಯವಹರಣೆಯಲ್ಲಿ ಅವರು ಭಾಗವಹಿಸಿರುವುದಿಲ್ಲ ಎಂದು ವಾದಿಸಲಾಗಿದೆ. ಆನಂತರ ಮಧ್ಯಸ್ಥಿಕೆ ನ್ಯಾಯಾಧಿಕರಣವು ಏಕಪಕ್ಷೀಯ ಸುನಾವಣೆಯನ್ನು ನಡೆಸಿತು ಎಂದು ಮಂಡಿಸಲಾಗಿದೆ. ಆದ್ದರಿಂದ, ಪ್ರತಿವಾದಿಗಳು ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದೆ ಯಾವುದೇ ಸಾಕ್ಷ್ಯಾಧಾರವನ್ನು ಪ್ರಸ್ತುತಪಡಿಸಲಿಲ್ಲ ಅಥವಾ ಮಂಡಿಸಲಿಲ್ಲ ಎಂದು ಮಂಡಿಸಲಾಗಿದೆ.

4.1 ಪ್ರಸ್ತುತ ಪ್ರಕರಣದಲ್ಲಿ ಹಳೆಯ ಮಧ್ಯಸ್ಥಿಕೆ ಕಾಯಿದೆ, 1940ರ ಅಡಿಯಲ್ಲಿ 7.2.1997ರಂದು ಮಧ್ಯಸ್ಥಿಕೆ ವ್ಯವಹರಣೆಗಳು ಪ್ರಾರಂಭವಾದವು ಮತ್ತು 25.03.1997ರಂದು ಮಧ್ಯಸ್ಥಿಕೆದಾರರು

ಮಧ್ಯಸ್ಥಿಕೆ ಕಾಯಿದೆ, 1996ರ ಅಡಿಯಲ್ಲಿ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಮುಂದುವರೆಸಲು ಸ್ವೇಚ್ಛಾನುಸಾರವಾಗಿ ನಿರ್ಧರಿಸಿದರು ಎಂದು ಮಂಡಿಸಲಾಗಿದೆ. ಪ್ರತಿವಾದಿಗಳು ಮಧ್ಯಸ್ಥಿಕೆಯಿಂದ ಹಿಂದೆ ಸರಿದಿದ್ದರು ಎಂದು ಮಂಡಿಸಲಾಗಿದೆ. ಆನಂತರ ಪ್ರತಿವಾದಿಗಳು ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದೆ ಪಕ್ಷಪಾತ ಮತ್ತು ದುಬಾರಿ ಶುಲ್ಕವನ್ನು ಪಶ್ನಿಸಿ ಅರ್ಜಿ ಸಲ್ಲಿಸಿದರು. ಅದಾಗ್ಯೂ, 12.03.1998ರಂದು ಏಕಪಕ್ಷೀಯ ಐತೀರ್ಪನ್ನು ಖಾತಾಗಳ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯವನ್ನು ಕಾಯ್ದಿರಿಸುವ ಒಪ್ಪಂದದ ನಿರ್ದಿಷ್ಟ ಕಾರ್ಯನಿರ್ವಹಣೆಗಾಗಿ ಹೊರಡಿಸಲಾಯಿತು. ವಾಸ್ತವವಾಗಿ, ಖಾತಾಗಳ ಸಂಯೋಜನೆಗೆ ಅರ್ಜಿ ಸಲ್ಲಿಸುವುದಕ್ಕೆ ಅಪೀಲುದಾರರಿಗೆ ಅವಕಾಶವಿದ್ದರೂ, ಅವರು ಅದನ್ನು ಮಾಡಲಿಲ್ಲ ಮತ್ತು ಪ್ರತಿವಾದಿಗಳು ಎರಡು ಬಾರಿ ಅದಕ್ಕೆ ಅರ್ಜಿ ಸಲ್ಲಿಸಿದ್ದರು ಎಂದು ಮಂಡಿಸಲಾಗಿದೆ. ಅಲ್ಲಿ ರಾಜಕಾಲುವೆ ಅಥವಾ ಮಳೆ ನೀರಿನ ಕಾಲುವೆ ಇದ್ದುದ್ದರಿಂದ, ಪ್ರತಿವಾದಿಗಳು ಎರಡು ಬಾರಿ ಖಾತಾಗಳನ್ನು ಸಂಯೋಜಿಸಲು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಮಂಡಿಸಲಾಗಿದೆ. ಆದ್ದರಿಂದ ಪ್ರತಿವಾದಿಗಳು ದಿನಾಂಕ: 17.03.2003ರ ಅಂತಿಮ ಅನುಮೋದನೆಯನ್ನು ಹಾಜರು ಪಡಿಸಲು ಪ್ರಕರಣ 34ರ ಅರ್ಜಿಯಲ್ಲಿನ ಸಾಕ್ಷ್ಯಾಧಾರವನ್ನು ಒದಗಿಸಲು ಅರ್ಜಿಯನ್ನು ಸಲ್ಲಿಸಿದ್ದು, ಈ ಅರ್ಜಿಯ ಮೂಲಕ ಖಾತಾಗಳನ್ನು ನಿವೇಶನಗಳೊಂದಿಗೆ ಸಂಯೋಜನೆಗೊಳಿಸುವ ಮನವಿಯನ್ನು ತಿರಸ್ಕರಿಸಲಾಗಿದೆ ಮತ್ತು ಆನಂತರ ಸಂಬಂಧಪಟ್ಟ ಅಧಿಕಾರಿಯನ್ನು ವಿಚಾರಣೆಗೆ ಒಳಪಡಿಸಬೇಕಾಗುತ್ತದೆ ಎಂದು ಮಂಡಿಸಿದ್ದಾರೆ. ಆದ್ದರಿಂದ, ಮಧ್ಯಸ್ಥಿಕೆ ಕಾಯಿದೆ 1996ರ ಪ್ರಕರಣ 34(2)(ಬಿ)(i) ಮತ್ತು (ii) ಮತ್ತು ಭಾರತ ಕರಾರು ಕಾಯಿದೆಯ ಪ್ರಕರಣ 56ರ ಹಿನ್ನೆಲೆಯಲ್ಲಿ ಈ ಐತೀರ್ಪು ಅನುಷ್ಠಾನಗೊಳಿಸಲು ಮತ್ತು/ಅಥವಾ ಜಾರಿಗೊಳಿಸಲು ಅಸಮರ್ಥವಾಗಿದೆ ಎಂಬುದು ಪ್ರತಿವಾದಿಗಳ ಪರವಾಗಿ ಸಲ್ಲಿಸಿದ ವಾದವಾಗಿದೆ ಎಂದು ಮಂಡಿಸಲಾಗಿದೆ.

4.2 ಪ್ರಸ್ತುತ ಪ್ರಕರಣದಲ್ಲಿ ಕಾಯಿದೆಯ ಪ್ರಕರಣ 34(2)(ಎ)ಗೆ ಮಾಡಲಾದ ತಿದ್ದುಪಡಿಗೆ ಮುಂಚಿನ ಅಂದರೆ ಕಾಯಿದೆ 33/2019ಕ್ಕೆ ಮುಂಚಿನ "ಪುರಾವೆಯ ಒದಗಿಸುವುದು" ಎಂಬ ಪದಾವಳಿಯನ್ನು ಒಳಗೊಂಡಿರುವ ಉಪಬಂಧಗಳು ಅನ್ವಯಿಸತಕ್ಕದ್ದು ಎಂದು ಮಂಡಿಸಲಾಗಿದೆ. ಅಪೀಲುದಾರರ ಪರವಾಗಿ ವಾದಿಸಲು ಕೋರಲಾಗಿರುವಂತೆ ಕೇವಲ ಪ್ರಕರಣ 34(2)(ಎ)ಯಲ್ಲಿ ಮಾತ್ರವೇ ಅಲ್ಲದೆ ಪ್ರಕರಣ 34(2)(ಎ) ಮತ್ತು 34(2)(ಬಿ)ಯಲ್ಲಿ ಉಲ್ಲೇಖಿಸಿರುವ ಆಧಾರದ ಮೇಲೆ ಐತೀರ್ಪನ್ನು ವಜಾಗೊಳಿಸಲು ಸಲ್ಲಿಸಲಾದ ಅರ್ಜಿಗೆ "ಪುರಾವೆಯನ್ನು ಒದಗಿಸುವುದು" ಎಂಬ ಪದಾವಳಿ ಅನ್ವಯವಾಗತಕ್ಕದ್ದು.

4.3 ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ***ಮೇಲೆ ಹೇಳಿದ ಫಿಜಾ ಡೆವಲಪರ್ಸ್, ಮೇಲೆ ಹೇಳಿದ ಎಂಕೆ ಗ್ಲೋಬಲ್ ಮತ್ತು ಮೇಲೆ ಹೇಳಿದ ಕೆನರಾ ನಿಧಿ*** ಪ್ರಕರಣಗಳಲ್ಲಿ ಈ ನ್ಯಾಯಾಲಯದ ನಿರ್ಣಯಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಪಕ್ಷಕಾರರು ಅನ್ಯಥಾ ಒಪ್ಪಿಗೆಯನ್ನು ಸೂಚಿಸದ ಹೊರತು, ತಿದ್ದುಪಡಿ ಕಾಯಿದೆಯ ಪ್ರಾರಂಭಕ್ಕೆ ಮೊದಲು ಆರಂಭವಾಗಿದ್ದ ಮಧ್ಯಸ್ಥಿಕೆ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಗೆ ಒಳಗೊಳ್ಳುವ ಮಧ್ಯಸ್ಥಿಕೆ ಕಾಯಿದೆಯು ಅನ್ವಯವಾಗತಕ್ಕದ್ದಲ್ಲ ಎಂಬ ತಮ್ಮ ಮಂಡನೆಗೆ ಪೂರಕವಾಗಿ ***(2019) 2 ಎಸ್‌ಸಿಸಿ 488ರಲ್ಲಿ ವರದಿಯಾಗಿರುವ ಎಸ್ ಎ ಸಿಂಗ್ಲಾ, ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಹಿಮಾಚಲ ಪ್ರದೇಶ ರಾಜ್ಯ*** ಪ್ರಕರಣದಲ್ಲಿ ನೀಡಿರುವ ನಿರ್ಣಯವನ್ನು ಸಹ ಅವರು ಇಲ್ಲಿ ಅವಲಂಬಿಸಿದ್ದಾರೆ.

4.4. ಮೇಲಿನ ವಾದಗಳನ್ನು ಮಂಡಿಸುತ್ತಾ, ಪ್ರಸ್ತುತ ಅಪೀಲನ್ನು ವಜಾಗೊಳಿಸುವಂತೆ ಪ್ರಾರ್ಥಿಸಲಾಗಿದೆ.

5. ನಾವು ಆಯಾ ಪಕ್ಷಕಾರರ ವಕೀಲರ ವಾದಗಳನ್ನು ಸುದೀರ್ಘವಾಗಿ ಆಲಿಸಿದ್ದೇವೆ.

6. ಈ ನ್ಯಾಯಾಲಯದ ಪರಿಗಣನೆಗಾಗಿ ಕೇಳಲಾಗಿರುವ ಸಂಕ್ಷಿಪ್ತ ಪ್ರಶ್ನೆಯೆಂದರೆ, ಮಧ್ಯಸ್ಥಿಕೆ ಮತ್ತು ಸಂಧಾನ ಕಾಯಿದೆ, 1996ರ ಪ್ರಕರಣ 34ರಡಿಯಲ್ಲಿ ಸಲ್ಲಿಸಲಾದ ಅರ್ಜಿಯಲ್ಲಿ ಸಾರ್ವಜನಿಕ ನೀತಿಗೆ ಸಂಬಂಧಿಸಿದ ಆಧಾರವನ್ನು ಬೆಂಬಲಿಸಲು ಅರ್ಜಿದಾರರಿಗೆ ಸಾಕ್ಷ್ಯಾಧಾರಗಳನ್ನು ನೀಡಲು ಅವಕಾಶ ನೀಡಬಹುದೇ? ಎಂಬುದು.

ಆರಂಭದಲ್ಲಿ ಪ್ರಸ್ತುತ ಪ್ರಕರಣದಲ್ಲಿ 1998ನೇ ಇಸವಿಯಲ್ಲಿಯೇ ಮಧ್ಯಸ್ಥಿಕೆ ವ್ಯವಹರಣೆಗಳು ಪ್ರಾರಂಭವಾದವು ಮತ್ತು ಮಧ್ಯಸ್ಥಿಕೆ ನ್ಯಾಯಾಧಿಕರಣವು ಐತೀರ್ಪನ್ನು ಘೋಷಿಸಿತ್ತು/ಹೊರಡಿಸಿತ್ತು, ಅಂದರೆ ಕಾಯಿದೆ 33/2019ರಲ್ಲಿ ಕಂಡಂತೆ ಪ್ರಕರಣ 34(2)(ಎ)ಗೆ ತಿದ್ದುಪಡಿ ಮಾಡಲಾಗುವುದಕ್ಕಿಂತ ಮುಂಚೆ ಎಂಬುದನ್ನು ಗಮನಿಸಬೇಕಾಗುತ್ತದೆ. ಕಾಯಿದೆ 33/2019ರ ಮೂಲಕ 34(2)(ಎ) ಪ್ರಕರಣಕ್ಕೆ ಮಾಡಲಾದ ತಿದ್ದುಪಡಿಗೂ ಮೊದಲು ಜಾರಿಯಲ್ಲಿದ್ದ ಕಾನೂನು ಅನ್ವಯವಾಗತಕ್ಕದ್ದು ಎಂದು ಉಚ್ಚ ನ್ಯಾಯಾಲಯದ ಮುಂದೆ ಅಪೀಲುದಾರರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲರು ಒಪ್ಪಿಕೊಂಡಿದ್ದರು ಎಂಬ ವಾಸ್ತವಾಂಶದ ಹೊರತಾಗಿಯೂ ಸಹ, ಕಾಯಿದೆ 33/2019 ರ ಮೂಲಕ 34(2)(ಎ) ಪ್ರಕರಣಕ್ಕೆ ಮಾಡಲಾದ ತಿದ್ದುಪಡಿಗೂ ಮುನ್ನವೇ ಮಧ್ಯಸ್ಥಿಕೆಯ ವ್ಯವಹರಣೆಗಳು ಆರಂಭಗೊಂಡಿದ್ದವು ಹಾಗೂ ಐತೀರ್ಪನ್ನು ಸಹ ಘೋಷಿಸಲಾಗಿತ್ತು; ಆದ್ದರಿಂದ, 34(2)(ಎ) ಪ್ರಕರಣದ ಪೂರ್ವ–ತಿದ್ದುಪಡಿ ಅನ್ವಯವಾಗತಕ್ಕದ್ದು ಎಂಬುದು ನಮ್ಮ

ಅಭಿಪ್ರಾಯವಾಗಿದೆ. ನಾವು ಈ ಅಭಿಪ್ರಾಯಕ್ಕೆ ಬರಲು ಕಾರಣವೇನೆಂದರೆ, ಕಾಯಿದೆ 33/2019 ರ ಮೂಲಕ ಪ್ರಕರಣ 34(2)(ಎ)ಗೆ ಮಾಡಲಾದ ತಿದ್ದುಪಡಿಯಿಂದ ಗಣನೀಯ ಬದಲಾವಣೆ ಉಂಟಾಗುತ್ತದೆ. ಪ್ರಕರಣ 34(2)(ಎ)ಯಲ್ಲಿನ ತಿದ್ದುಪಡಿಗೆ ಮೊದಲು, ಒಂದು ವೇಳೆ ಅರ್ಜಿ ಸಲ್ಲಿಸುತ್ತಿರುವ ಒಬ್ಬ ಪಕ್ಷಕಾರರು "ಪುರಾವೆಗಳನ್ನು ಒದಗಿಸಿದಲ್ಲಿ" ಹಾಗೂ ಪ್ರಕರಣ 34(2)(ಎ) ಮತ್ತು ಪ್ರಕರಣ 34(2)(ಬಿ)ಯಲ್ಲಿ ನಿರೂಪಿಸಲಾಗಿದ್ದ ಆಧಾರಗಳು ತೃಪ್ತಿಕರವಾಗಿದ್ದಲ್ಲಿ, ನ್ಯಾಯಾಲಯವು ಒಂದು ಮಧ್ಯಸ್ಥಿಕೆ ಐತೀರ್ಪನ್ನು ವಜಾಗೊಳಿಸಬಹುದಾಗಿತ್ತು. ಅದಾಗ್ಯೂ, ಪ್ರಕರಣ 34(2)(ಎ)ಗೆ ತಿದ್ದುಪಡಿ ಮಾಡಿದ ತರುವಾಯದಲ್ಲಿ "ಪುರಾವೆಗಳನ್ನು ಒದಗಿಸುವುದು" ಎಂಬ ಪದಾವಳಿಯನ್ನು "ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲಾತಿಗಳ ಆಧಾರದ ಮೇಲೆ ಸ್ಥಾಪಿಸುವುದು" ಎಂಬ ಪದಾವಳಿಯೊಂದಿಗೆ ಬದಲಾಯಿಸಲಾಗಿರುತ್ತದೆ. ಆ ವಿಷಯಕ್ಕೆ ಸಂಬಂಧಿಸಿದಂತೆ, ಕಾಯಿದೆ 33/2019ರ ಮೂಲಕ ಪ್ರಕರಣ 34(2)(ಎ)ಗೆ ಮಾಡಲಾದ ತಿದ್ದುಪಡಿಗೂ ಮುನ್ನವೇ ಆರಂಭವಾದ ಮತ್ತು ಮುಕ್ತಾಯಗೊಂಡ ಮಧ್ಯಸ್ಥಿಕೆ ವ್ಯವಹರಣೆಗಳ ಪ್ರಕರಣದಲ್ಲಿ 34(2)(ಎ) ಪ್ರಕರಣದ ಪೂರ್ವ ತಿದ್ದುಪಡಿ ಅನ್ವಯವಾಗತಕ್ಕದ್ದು ಎಂದು ನಾವು ಎತ್ತಿಹಿಡಿಯುತ್ತೇವೆ.

7. ಈಗ ಒಂದು ಅರ್ಜಿಯನ್ನು ಸಲ್ಲಿಸುತ್ತಿರುವ ಒಬ್ಬ ಪಕ್ಷಕಾರನು "ಪುರಾವೆಗಳನ್ನು ಒದಗಿಸಬೇಕು" ಎಂಬ ಅಗತ್ಯವನ್ನು ಒಳಗೊಂಡ ಪ್ರಕರಣ 34(2)(ಎ) ಪೂರ್ವ–ತಿದ್ದುಪಡಿಯ ಅಡಿಯಲ್ಲಿ ಸಲ್ಲಿಸಲಾಗಿರುವ ಒಂದು ಅರ್ಜಿಯಲ್ಲಿ, ಅಂತಹ ಅರ್ಜಿದಾರನಿಗೆ ಅಫಿಡವಿಟ್ ಅಥವಾ ಇನ್ನ್ಯಾವುದೇ ರೀತಿಯಲ್ಲಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ನೀಡಬಹುದೇ? ಎಂಬ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ನ್ಯಾಯಾಲಯದ ಕೆಲವು ನಿರ್ಣಯಗಳನ್ನು ಉಲ್ಲೇಖಿಸುವ ಅಗತ್ಯವಿದೆ.

(i) ***ಮೇಲೆ ಹೇಳಿದ ಫಿಜಾ ಡೆವಲಪರ್ಸ್*** ಪ್ರಕರಣದಲ್ಲಿ, ನ್ಯಾಯಾಲಯವು ಕೇಳಿದ್ದ ಪ್ರಶ್ನೆಯೆಂದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ 1ರ ಆದೇಶ 14ರ ಅಡಿಯಲ್ಲಿ ಪರಿಗಣಿಸಲಾದ ವಿವಾದಾಂಶಗಳನ್ನು ಕಾಯಿದೆಯ ಪ್ರಕರಣ 34ರ ಅಡಿಯಲ್ಲಿನ ಅರ್ಜಿಯಲ್ಲಿ ರೂಪಿಸಬಹುದೇ? ಇದಕ್ಕೆ ಉತ್ತರಿಸುತ್ತಾ, ಈ ನ್ಯಾಯಾಲಯವು ಖಂಡಿಕೆ 14, 17, 18, 21, 22, 24, 29 ಹಾಗೂ 31ರಲ್ಲಿ ಈ ಕೆಳಗಿನಂತೆ ಗಮನಿಸಿದೆ ಮತ್ತು ಎತ್ತಿಹಿಡಿದಿದೆ.

"14. ಒಂದು ಸಂಕ್ಷಿಪ್ತ ವ್ಯವಹರಣೆಯಲ್ಲಿ, ಪ್ರತಿವಾದಿಗೆ ತನ್ನ ಆಕ್ಷೇಪಣೆಗಳನ್ನು ಅಥವಾ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಆನಂತರ ನ್ಯಾಯಾಲಯವು ಪಕ್ಷಕಾರರಿಗೆ ತಮ್ಮ ತಮ್ಮ ನಿಲುವುಗಳಿಗೆ ಪುರಾವೆಯಾಗಿ ಅಫಿಡವಿಟ್ ಸಲ್ಲಿಸಲು ಅವಕಾಶ ನೀಡುತ್ತದೆ, ಮತ್ತು ಅಗತ್ಯವಿದ್ದರೆ ವಾದಗಳನ್ನು ಆಲಿಸುವ ಮೊದಲು ಮತ್ತೊಂದು ಕಡೆಯ ಪಕ್ಷಕಾರರ ಪರವಾಗಿ ಪಾಟೀ ಸವಾಲಿಗೆ ಅನುಮತಿ ನೀಡುತ್ತದೆ. ಅಂತಹ ವ್ಯವಹರಣೆಗಳಲ್ಲಿ ವಿವಾದಾಂಶಗಳನ್ನು ರೂಪಿಸುವ ಅಗತ್ಯವಿಲ್ಲ. ವಿವಾದಾಂಶಗಳು ಅಗತ್ಯವಿಲ್ಲ ಎಂದು ಹೇಳುವ ಸಂದರ್ಭದಲ್ಲಿ, ಸಾಕ್ಷ್ಯಾಧಾರಗಳು ಅಗತ್ಯವಿಲ್ಲ ಎಂದು ಅದರ ಅರ್ಥವಲ್ಲ ಎಂದು ನಾವು ಸೇರಿಸಿ ನುಡಿಯುತ್ತೇವೆ.

********

17. ಕಾಯಿದೆಯ ಯೋಜನೆ ಮತ್ತು ಉಪಬಂಧಗಳು ಮಧ್ಯಸ್ಥಿಕೆಗೆ ಸಂಬಂಧ ಪಡುವ ನ್ಯಾಯಾಲಯಗಳಿಗೆ ಸಂಬಂಧಿಸಿದ ಎರಡು ಪ್ರಮುಖ ಅಂಶಗಳನ್ನು ಬಹಿರಂಗಪಡಿಸುತ್ತವೆ. ಮೊದಲನೆಯದು, ಮಧ್ಯಸ್ಥಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪ ಕನಿಷ್ಠವಾಗಿರಬೇಕು. ಎರಡನೆಯದು, ನ್ಯಾಯಾಲಯದ ಮುಂದೆ ಸಲ್ಲಿಸಲಾಗುವ ಮಧ್ಯಸ್ಥಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ತೋರಿಸಲಾದ ತುರ್ತು ಪ್ರಜ್ಞೆಯಲ್ಲಿ ತ್ವರಿತ ವಿಲೇವಾರಿಯ ಅಗತ್ಯವಿರುತ್ತದೆ.

18. ಕಾಯಿದೆಯ ಪ್ರಕರಣ 5 ಕಾಯಿದೆಯ ಭಾಗ 1ರಿಂದ ನಿಯಂತ್ರಿಸಲ್ಪಡುವ ವಿಷಯಗಳಲ್ಲಿ, ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಒಳಗೊಂಡಿರುವ ಏನನ್ನೇ ಆದರೂ ಯಾವುದೇ ನ್ಯಾಯಾಂಗ ಪ್ರಾಧಿಕಾರವು ಕಾಯಿದೆಯಲ್ಲಿ ಹೀಗೆ ಉಪಬಂಧಿಸದ ಹೊರತು ಮಧ್ಯಪ್ರವೇಶಿಸುವಂತಿಲ್ಲ ಎಂದು ಉಪಬಂಧಿಸುತ್ತದೆ.

********

21. ಆದ್ದರಿಂದ ನಾವು ಮೂರು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಪರಿಗಣನೆಗಾಗಿ ಪರಿಶೀಲಿಸಬಹುದು. ಮೊದಲನೆಯದಾಗಿ, ಈ ಕಾಯಿದೆಯು ವಿಶೇಷ ಕಾಯಿದೆಯಾಗಿದೆ ಮತ್ತು ಪ್ರಕರಣ 34ರಲ್ಲಿ ಒಂದು ವಿಶೇಷ ಪರಿಹಾರವನ್ನು ಉಪಬಂಧಿಸಲಾಗಿದೆ. ಎರಡನೆಯದಾಗಿ, ಪ್ರಕರಣ 34ರ ಉಪ ಪ್ರಕರಣ 2ರಲ್ಲಿ ಉಲ್ಲೇಖಿಸಿರುವ ಆಧಾರಗಳಲ್ಲಿ ಯಾವುದಾದರೂ ಒಂದು ಅಸ್ತಿತ್ವದಲ್ಲಿದ್ದರೆ ಮಾತ್ರ ಮಧ್ಯಸ್ಥಿಕೆಯ ಐತೀರ್ಪನ್ನು ರದ್ದುಗೊಳಿಸಬಹುದಾಗಿದೆ. ಮೂರನೆಯದಾಗಿ, ಪ್ರಕರಣ 34ರ ಅಡಿಯಲ್ಲಿನ ವ್ಯವಹರಣೆ ತ್ವರಿತವಾಗಿ ವಿಲೆಗೊಳಿಸುವ ಅಗತ್ಯವಿರುತ್ತದೆ.

22. ಪ್ರಕರಣ 34ರ ಅಡಿಯಲ್ಲಿ ನಡೆಯುವ ವ್ಯವಹರಣೆಯಲ್ಲಿನ ವಿಚಾರಣೆಯ ವ್ಯಾಪ್ತಿಯನ್ನು ಪ್ರಕರಣ 34ರ ಉಪ ಪ್ರಕರಣ 2ರಲ್ಲಿ ಉಲ್ಲೇಖಿಸಿರುವ ಆಧಾರಗಳಲ್ಲಿ ಯಾವುದಾದರೂ ಒಂದು ಐತೀರ್ಪನ್ನು ವಜಾಗೊಳಿಸುವುದಕ್ಕಾಗಿ ಅಸ್ತಿತ್ವದಲ್ಲಿದೆಯೇ ಎಂದು ಪರಿಗಣಿಸಲು ಸೀಮಿತಗೊಳಿಸಲಾಗಿದೆ. ಶ್ರೀ ಒ.ಪಿ.ಮಲ್ಹೋತ್ರಾ ಅವರ "ದಿ ಲಾ ಅಂಡ್ ಪ್ರಾಕ್ಟೀಸ್ ಆಫ್ ಆರ್ಬಿಟ್ರೇಷನ್ ಅಂಡ್ ಕನ್ಸಿಲಿಯೇಷನ್" [ಪ್ಯಾರಾ (1) 34–14, ಪು. ಸಂಖ್ಯೆ: 768 ಮೊದಲ ಆವೃತ್ತಿ] ಎಂಬ ಪುಸ್ತಕದಿಂದ "ಆಕ್ಷೇಪಣೆಯ ಆಧಾರಗಳಿಗೆ" ಸಂಬಂಧಿಸಿದ ವಿಶ್ಲೇಷಣೆಯನ್ನು ನಾವು ಉದ್ಧರಿಸಬಹುದಾಗಿದೆ.

“ಪ್ರಕರಣ 5 ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ನ್ಯಾಯಾಲಯದ ಹಸ್ತಕ್ಷೇಪವನ್ನು ನಿಯಂತ್ರಿಸುತ್ತದೆ. ಭಾರತದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಯಾವುದೇ ಅಂಶಗಳನ್ನು ಒಳಗೊಂಡಿದ್ದರೂ, ಈ ಕಾಯಿದೆಯ ಭಾಗ ಒಂದರಿಂದ ನಿಯಂತ್ರಿಸಲ್ಪಡುವ ವಿಷಯಗಳಲ್ಲಿ, ಈ ಭಾಗದಲ್ಲಿ ಹೀಗೆ ಉಪಬಂಧಿಸಿರುವುದನ್ನು ಹೊರತುಪಡಿಸಿ ನ್ಯಾಯಾಲಯವು ಮಧ್ಯ ಪ್ರವೇಶಿಸಲಾರದು ಎಂದು ಇದು ಉಪಬಂಧಿಸುತ್ತದೆ. ಈ ನೀತಿಗೆ ಅನುಸಾರವಾಗಿ ಪ್ರಕರಣ 34 ಮಧ್ಯಸ್ಥಿಕೆಯ ಐತೀರ್ಪನ್ನು ರದ್ದುಗೊಳಿಸುವ ನ್ಯಾಯಾಲಯದ ಹಕ್ಕಿನ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸುತ್ತದೆ. ಇದು ಒಟ್ಟಾರೆಯಾಗಿ ಒಂದು ಐತೀರ್ಪನ್ನು ರದ್ದುಗೊಳಿಸಲು ಏಳು ಆಧಾರಗಳನ್ನು ಉಪಬಂಧಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ಏಳು ಆಧಾರಗಳಲ್ಲಿ ಒಂದು ಅಥವಾ ಹೆಚ್ಚು ಆಧಾರಗಳು ಅಸ್ತಿತ್ವದಲ್ಲಿ ಇದ್ದರೆ ಮಾತ್ರ ಮಧ್ಯಸ್ಥಿಕೆ ಐತೀರ್ಪನ್ನು ರದ್ದುಪಡಿಸಬಹುದು.

ಪ್ರಕರಣ 34(2)(ಎ)ಯಲ್ಲಿ ಮೊದಲ 5 ಆಧಾರಗಳನ್ನು ಉಲ್ಲೇಖಿಸಲಾಗಿದೆ. ಈ ಆಧಾರಗಳಲ್ಲಿ ಯಾವುದನ್ನಾದರೂ ಯಶಸ್ವಿಯಾಗಿ ಅನ್ವಯಿಸಿಕೊಳ್ಳಲು, ಪಕ್ಷಕಾರರು ಅಂತಹ ಒಂದು ಅಥವಾ ಹೆಚ್ಚು ಆಧಾರಗಳ ಅಸ್ತಿತ್ವವನ್ನು ವಾದಿಸಿ, ಸಾಬೀತುಪಡಿಸಬೇಕು. ಅಂದರೆ, ಐತೀರ್ಪನ್ನು ಪ್ರಶ್ನಿಸುವ ಯಾವುದೇ ಪಕ್ಷಕಾರರು ಯಾವುದೇ ಒಂದು ಆಧಾರದ ಅಸ್ತಿತ್ವವನ್ನು ಸಾಬೀತುಪಡಿಸುವುದಕ್ಕೋಸ್ಕರ ಸಾಕಷ್ಟು ವಿಶ್ವಾಸಾರ್ಹ ಸಾಕ್ಷ್ಯಾಧಾರಗಳನ್ನು ಒದಗಿಸುವ ಮೂಲಕ ರುಜುವಾತುಪಡಿಸುವ ಹೊಣೆಯನ್ನು ನಿರ್ವಹಿಸಬೇಕಾಗುತ್ತದೆ. ಉಳಿದ 2 ಆಧಾರಗಳು ಪ್ರಕರಣ 34(2)(ಬಿ)ಯಲ್ಲಿದ್ದು, ಅದರಲ್ಲಿ ಒಂದು ವೇಳೆ ವಿವಾದದಲ್ಲಿನ ವಸ್ತು – ವಿಷಯವು ಮಧ್ಯಸ್ಥಿಕೆಗೆ ಒಳಪಡದಿದ್ದಲ್ಲಿ ಅಥವಾ ಪ್ರಶ್ನಿತ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದ್ದಲ್ಲಿ ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ಒಂದು ಐತೀರ್ಪನ್ನು ರದ್ದುಪಡಿಸಬಹುದಾಗಿದೆ”.

ಒಂದು ಐತೀರ್ಪನ್ನು ರದ್ದುಪಡಿಸಲು ಇರುವ ಆಧಾರಗಳು ನಿರ್ದಿಷ್ಟವಾಗಿವೆ. ಆದ್ದರಿಂದ ಅರ್ಜಿಯನ್ನು ಸಲ್ಲಿಸುವ ಒಬ್ಬ ಅರ್ಜಿದಾರನು ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಯಾವುದೇ ಆಧಾರದ ಅಂಶಗಳನ್ನು ರೂಪಿಸಲು ಮತ್ತು ಅದನ್ನು ಸಾಬೀತುಪಡಿಸಲು ಅಗತ್ಯವಾದ ವಾಸ್ತವಾಂಶಗಳನ್ನು ವಾದಿಸಬೇಕಾಗುತ್ತದೆ. ಆದ್ದರಿಂದ, ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸುವ ಅರ್ಜಿಯಲ್ಲಿ ಉದ್ಭವಿಸುವ ಏಕೈಕ ಪ್ರಶ್ನೆ ಎಂದರೆ, ಅದರಲ್ಲಿಯ ಉಪ–ಪ್ರಕರಣ (2)ರಲ್ಲಿನ ನಿರ್ದಿಷ್ಟ ಆಧಾರಗಳಲ್ಲಿ ಯಾವುದಾದರೂ ಆಧಾರದ ಮೇಲೆ ಐತೀರ್ಪನ್ನು ರದ್ದುಗೊಳಿಸುವ ಅಗತ್ಯವಿದೆಯೆ? ಉಪ–ಪ್ರಕರಣ (2) ಸಹ, ಸ್ಪಷ್ಟವಾಗಿ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯ ಮೇಲೆ ರುಜುವಾತಿನ ಹೊಣೆಯನ್ನು ಹೊರಿಸುತ್ತದೆ. ಆದ್ದರಿಂದ ತೀರ್ಪಿಗಾಗಿ ಉದ್ಭವಿಸುವ ಪ್ರಶ್ನೆ ಮತ್ತು ಯಾವ ವ್ಯಕ್ತಿಯ ಮೇಲೆ ರುಜುವಾತಿನ ಹೊಣೆಯನ್ನು ಹೊರಿಸಲಾಗಿದೆ ಎಂಬುದನ್ನು ಶಾಸನಬದ್ಧವಾಗಿ ನಿರ್ದಿಷ್ಟಪಡಿಸಲಾಗಿದೆ. ಹೀಗಾಗಿ ವಿವಾದಾಂಶಗಳ ಅಗತ್ಯವನ್ನು ಕೈಬಿಡಲಾಗಿದೆ.

********

24. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸಲಾಗುವ ಒಂದು ಅರ್ಜಿಯು ಒಂದು ಏಕೈಕ ವಿವಾದಾಂಶದ ವ್ಯವಹರಣೆಯಾಗಿದ್ದು, ಆ ನಿರ್ದಿಷ್ಟ ಉಪಬಂಧದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ ಎಂಬ ವಾಸ್ತವಾಂಶವೇ ಅದರಲ್ಲಿ ಅಡಕವಾಗಿರುವ ವಿವಾದಾಂಶವನ್ನು ಘೋಷಿಸುತ್ತದೆ. ವಿವಾದಾಂಶಗಳನ್ನು ರೂಪಿಸುವ ಯಾವುದೇ ಮುಂದಿನ ಕ್ರಮವು ವ್ಯವಹರಣೆಯನ್ನು ವಿಳಂಬಗೊಳಿಸುತ್ತದೆ. ಆದ್ದರಿಂದ ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸುವ ಅರ್ಜಿಗಳಲ್ಲಿ ವಿವಾದಾಂಶಗಳನ್ನು ರೂಪಿಸುವ ಅಗತ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ.

********

29. ಒಂದು ನಿಯತ ಸಿವಿಲ್ ದಾವೆಯಲ್ಲಿ, ಪ್ರತಿವಾದವನ್ನು ಸಲ್ಲಿಸಲು ವಿಫಲವಾದ ಸಂದರ್ಭದಲ್ಲಿ, ವಾದದಲ್ಲಿ ಒಳಗೊಂಡಿರುವ ವಾಸ್ತವಾಂಶಗಳ ಆಧಾರದ ಮೇಲೆ ನ್ಯಾಯಾಲಯವು ತೀರ್ಪು ನೀಡುವುದು ಕಾನೂನು ಬದ್ಧವಾಗಿರುತ್ತದೆ [ಸಂಹಿತೆಯ ಆದೇಶ 8 ನಿಯಮ 5 (2)ನ್ನು ನೋಡಿ]. ಆದರೆ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯಲ್ಲಿ, ಯಾವುದೇ ಪ್ರತಿವಾದಿ ಇಲ್ಲದಿದ್ದರೂ ಸಹ, ಅರ್ಜಿಯಲ್ಲಿ ಒಳಗೊಂಡಿರುವ ಹೇಳಿಕೆಗಳ ಆಧಾರದ ಮೇಲೆ ನ್ಯಾಯಾಲಯವು ಐತೀರ್ಪನ್ನು ರದ್ದುಗೊಳಿಸಲು ಸಾಧ್ಯವಿರುವುದಿಲ್ಲ. ಪ್ರತಿವಾದಿಯು ಇದ್ದರೂ ಅಥವಾ ಇಲ್ಲದಿದ್ದರೂ ಅರ್ಜಿದಾರರು ಪ್ರಕರಣ 34(2)(ಎ) ಮತ್ತು (ಬಿ)ಯಲ್ಲಿ ವಿವರಿಸಿರುವ ಆಧಾರಗಳಲ್ಲಿ ಯಾವುದಾದರೂ ಒಂದನ್ನು ಸಾಬೀತುಪಡಿಸಬೇಕು. ಅರ್ಜಿದಾರನು ಖಂಡ (ಬಿ)ಯ ಅಡಿಯಲ್ಲಿನ ಆಧಾರಗಳನ್ನು ಅವಲಂಬಿಸದಿದ್ದರೂ ಸಹ ಪ್ರಕರಣ 34(2)(ಬಿ)ಯಲ್ಲಿ ಉಲ್ಲೇಖಿಸಿರುವ ಎರಡು ಆಧಾರಗಳಲ್ಲಿ ಯಾವುದಾದರೂ ಒಂದು ಆಧಾರದ ಮೇಲೆ ಐತೀರ್ಪನ್ನು ವಜಾಗೊಳಿಸಲು ಸಾಧ್ಯವಿದೆಯೇ ಎಂಬುದನ್ನು ಕಂಡುಕೊಳ್ಳಲು ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ಐತೀರ್ಪನ್ನು ಪರಿಶೀಲಿಸಬಹುದಾಗಿದೆ. ಬಹುಶಃ ಈ ಅರ್ಥದಲ್ಲಿ, ಉಚ್ಚ ನ್ಯಾಯಾಲಯವು ವ್ಯವಹರಣೆಯು ಪ್ರತಿಕೂಲವಾಗಿರಬಾರದು ಎಂದು ಹೇಳಿದೆ. ಅದು ಹಾಗೇ ಇರಲಿ.

*********

31. ಕಾಯಿದೆಯ ಪ್ರಕರಣ 34ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳು ಪ್ರತಿವಾದಿ–ಪ್ರತ್ಯರ್ಜಿದಾರರ ಆಕ್ಷೇಪಣೆಗಳ ಉಪಬಂಧಗಳನ್ನು ಹೊಂದಿರುವ ಸಂಕ್ಷಿಪ್ತ ವ್ಯವಹರಣೆಗಳಾಗಿವೆ. ಹಾಗೂ ಇದರಲ್ಲಿ ಪ್ರಕರಣ 34(2)ರ ಅಡಿಯಲ್ಲಿ ಯಾವುದೇ ಆಧಾರದ ಅಸ್ತಿತ್ವವನ್ನು "ಸಾಬೀತುಪಡಿಸಲು" ಅರ್ಜಿದಾರನಿಗೆ ಅವಕಾಶ ನೀಡಲಾಗಿದೆ. ಅರ್ಜಿದಾರನಿಗೆ ಪುರಾವೆಗಾಗಿ ತನ್ನ ಸಾಕ್ಷಿಗಳ ಅಫಿಡೆವಿಟ್‌ಗಳನ್ನು ಸಲ್ಲಿಸಲು ಅನುಮತಿ ಇದೆ. ಪ್ರತಿವಾದಿ–ಪ್ರತ್ಯರ್ಜಿದಾರನಿಗೆ ತನ್ನ ಸಾಕ್ಷ್ಯವನ್ನು ಅಫಿಡವಿಟ್ ಮೂಲಕ ಸಲ್ಲಿಸಲು

ತತ್ಸಮಾನವಾದ ಅವಕಾಶವನ್ನು ನೀಡಲಾಗುತ್ತದೆ. ಪ್ರಕರಣದಲ್ಲಿ ಅಗತ್ಯವಿದ್ದರೆ, ಅಫಿಡವಿಟ್‌ನಲ್ಲಿ ಪ್ರಮಾಣೀಕರಿಸಿದ ವ್ಯಕ್ತಿಗಳ ಪಾಟೀ ಸವಾಲಿಗೆ ನ್ಯಾಯಾಲಯ ಅನುಮತಿ ನೀಡುತ್ತದೆ. ಆನಂತರ ನ್ಯಾಯಾಲಯವು ವಾದಗಳನ್ನು ಆಲಿಸಿ, ಮತ್ತು/ಅಥವಾ ಲಿಖಿತ ಹೇಳಿಕೆಗಳನ್ನು ಸ್ವೀಕರಿಸುತ್ತದೆ ಮತ್ತು ಆ ವಿಷಯವನ್ನು ನಿರ್ಧರಿಸುತ್ತದೆ. ಸಹಜವಾಗಿ, ಇದು ಸಾಮಾನ್ಯ ಪ್ರಕ್ರಿಯೆಯಾಗಿದೆ. ಯಾವುದೇ ನಿರ್ದಿಷ್ಟ ಪ್ರಕರಣದ ಅಥವಾ ಸ್ಥಳಿಯ ನಿಯಮಗಳ ವಾಸ್ತವಾಂಶಗಳನ್ನು ಆಧರಿಸಿ ನ್ಯಾಯಾಲಯವು ಈ ಪ್ರಕ್ರಿಯೆಯನ್ನು ಬದಲಾಯಿಸಬಹುದಾಗಿದೆ. ಅದಾಗ್ಯೂ, ಸಂಹಿತೆಯ ನಿಯಮ 1 ಆದೇಶ 14ರ ಅಡಿಯಲ್ಲಿ ಆಲೋಚಿಸಿದಂತೆ ವಿವಾದಾಂಶಗಳನ್ನು ರೂಪಿಸುವುದು ಕಾಯಿದೆಯ ಪ್ರಕರಣ 34ರ ಅಡಿಯಲ್ಲಿನ ವ್ಯವಹರಣೆಗಳ ಪ್ರಕ್ರಿಯೆಯ ಅವಿಭಾಜ್ಯ ಅಂಗವಲ್ಲ ಎಂಬುದು ಸ್ಪಷ್ಟವಾಗಿದೆ**”**.

(ii) ***ಮೇಲೆ ಹೇಳಿದ ಫಿಜಾ ಡೆವಲಪರ್ಸ್*** ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯ ***ಮೇಲೆ ಹೇಳಿದ ಎಂಕೆ ಗ್ಲೋಬಲ್*** ಪ್ರಕರಣದಲ್ಲಿ ತರುವಾಯದಲ್ಲಿ ಪರಿಗಣಿಸಲಾಗಿದೆ ಮತ್ತು ಖಂಡಿಕೆ 21ರಲ್ಲಿ ಇದನ್ನು ಗಮನಿಸಲಾಗಿದೆ ಹಾಗೂ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

**“**21. ಆದ್ದರಿಂದ 1996ರ ಕಾಯಿದೆಯನ್ನು ಜಾರಿ ತರುವುದಕ್ಕೆ ಮಧ್ಯಸ್ಥಿಕೆ ವಿವಾದಗಳ ತ್ವರಿತ ಇತ್ಯರ್ಥವೇ ಕಾರಣವಾಗಿದೆ ಮತ್ತು ಮೇಲಿನ ಉದ್ದೇಶವನ್ನು ಬಲಪಡಿಸಲು ಸದರಿ ಕಾಯಿದೆಗೆ ತಿದ್ದುಪಡಿಗಳನ್ನು ಸೇರಿಸುವುದಕ್ಕೆ ಕೂಡ ಕಾರಣವಾಗಿದೆ. ಸ್ಪಷ್ಟವಾಗಿ, ಪ್ರಕರಣ 34ರ ಅಡಿಯಲ್ಲಿ ಸಂಕ್ಷಿಪ್ತ ವ್ಯವಹರಣೆಗಳಲ್ಲಿ ವಿವಾದಾಂಶಗಳನ್ನು ರೂಪಿಸಿದ್ದಲ್ಲಿ ಮತ್ತು ಮೌಖಿಕ ಸಾಕ್ಷ್ಯವನ್ನು ದಾಖಲಿಸಿಕೊಂಡಲ್ಲಿ ಈ ಉದ್ದೇಶವು ವಿಫಲಗೊಳ್ಳುತ್ತದೆ. 2018ರ ಬಿಲ್ ಸಂಖ್ಯೆ 100ನ್ನು ಅಂಗೀಕರಿಸಿದಲ್ಲಿ ಪ್ರಕರಣ 34ರ ಅಡಿಯಲ್ಲಿ ಅರ್ಜಿ ಸಲ್ಲಿಸುವ ಹಂತದಲ್ಲಿರುವ ಪುರಾವೆಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲಾಗುತ್ತದೆ. ಕಾನೂನಿನ ಪ್ರಸ್ತುತ ಸ್ಥಿತಿಯನ್ನು ಗಮನಿಸಿದಾಗ, ದೆಹಲಿ ಉಚ್ಚ ನ್ಯಾಯಾಲಯದ ಎರಡು ಆರಂಭಿಕ ತೀರ್ಪುಗಳು *[ಸಂದೀಪ್ ಕುಮಾರ್ ವಿರುದ್ಧ*

*ಅಶೋಕ್ ಹನ್ಸ್* 2004 ಎಸ್ಸಿಸಿ ಆನ್ ಲೈನ್ ಡೆಲ್ 106: (2004) 3 ಆರ್ಬ್ ಎಲ್‌ಆರ್ 306] [*ಸಿಯಾಲ್ ಬಯೋಎನರ್ಜಿ ವಿರುದ್ಧ ಎಸ್‌ಬಿಇಸಿ ಸಿಸ್ಟಮ್ಸ್* 2004 ಎಸ್‌ಸಿಸಿ ಆನ್ ಲೈನ್ ಡೆಲ್ 863 ಎಐಆರ್ 2005 ಡೆಲ್ 95] , ಇವುಗಳನ್ನು ನಾವು ಇಲ್ಲಿ ಮೇಲೆ ಉಲ್ಲೇಖಿಸಿದ್ದು. ಇವು ಪ್ರಕರಣ 34 (2) (ಎ) ಅಡಿಯಲ್ಲಿ ಪುರಾವೆಗಳನ್ನು ಒದಗಿಸುವುದರ ಬಗ್ಗೆ ಕಾನೂನಿನಲ್ಲಿನ ಸ್ಥಾನವನ್ನು ಸೂಕ್ತವಾಗಿ ಸೂಚಿಸುತ್ತವೆ. ಅದೇ ರೀತಿ, ಕಲ್ಕತ್ತಾ ಉಚ್ಚ ನ್ಯಾಯಾಲಯದ ತೀರ್ಪು [*ಡಬ್ಲೂ ಟೆಕ್‌ನಿಕ್ಸ್ ಮತ್ತು ನೆಟ್ ಸೋಲ್ಯುಷನ್ಸ್ (ಪ್ರೈ) ನಿಯಮಿತ ವಿರುದ್ಧ ಗಾಟಿ ನಿಯಮಿತ,* 2012 ಎಸ್‌ಸಿಸಿ ಆನ್ ಲೈನ್ ಕ್ಯಾಲ್ 4271] ಸಹ ಇದನ್ನು ಸೂಚಿಸುತ್ತದೆ. ಒಂದು ವೇಳೆ, ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ *[ಪಂಜಾಬ್ ಎಸ್‌ಐಡಿಸಿ ಲಿಮಿಟೆಡ್ ವಿರುದ್ಧ ಸುನಿಲ್ ಕೆ ಕನ್ಸಾಲ್,* 2012 ಎಸ್.ಸಿ.ಸಿ ಆನ್ ಲೈನ್ ಪಿ & ಎಚ್ 19641] ಅನುಸರಿಸಲಾದ ಪ್ರಕ್ರಿಯೆಯನ್ನು ಪಾಲಿಸಿದಲ್ಲಿ ಉಲ್ಲಂಘನೆಯ ಹೆಚ್ಚಿನ ಪ್ರಕರಣಗಳಲ್ಲಿ ಮಾತ್ರ ಒಂದು ವರ್ಷದ ಸಮಯ ಮಿತಿಯನ್ನು ಪಾಲಿಸಲಾಗಿದೆ ಎಂದು ಸಹ ನಾವು ಇಲ್ಲಿ ನುಡಿಯುತ್ತೇವೆ. ಆದ್ದರಿಂದ ಸದರಿ ನಿರ್ಣಯವನ್ನು ನಾವು ತಳ್ಳಿ ಹಾಕುತ್ತಿದ್ದೇವೆ. ಫಿಜಾ ಡೆವಲಪರ್ಸ್ [*ಫಿಜಾ ಡೆವಲಪರ್ಸ್ & ಇಂಟರ್–ಟ್ರೇಡ್ (ಪ್ರೈ) ಲಿಮಿಟೆಡ್ ವಿರುದ್ಧ ಎಎಂಸಿಐ (ಇಂಡಿಯಾ) (ಪ್ರೈ) ಲಿಮಿಟೆಡ್,* (2009) 17 ಎಸ್‌ಸಿಸಿ 796 (2011) 2 ಎಸ್‌ಸಿಸಿ (ಸಿಐವಿ) 637] ಪ್ರಕರಣದಲ್ಲಿ ನೀಡಲಾದ ನಿರ್ಣಯವು ಸರಿಯಾದ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ ಏಕೆಂದರೆ ಅದರ ಅಂತಿಮ ಕಾರಣವು ಸಂಕ್ಷಿಪ್ತ ವ್ಯವಹರಣೆಯಾಗಿರುವ ಪ್ರಕರಣ 34 ರ ಅಡಿಯಲ್ಲಿ ಸಲ್ಲಿಸುವ ಅರ್ಜಿಯ ಸುನಾವಣೆಯ ಹಂತದಲ್ಲಿ ವಿವಾದಾಂಶಗಳನ್ನು ತೆಗೆದು ಹಾಕುವ ಅವಶ್ಯಕತೆ ಇಲ್ಲ ಎಂಬುದಾಗಿದೆ. ಅದಾಗ್ಯೂ, ಈ ತೀರ್ಪನ್ನು ಈಗ ಪ್ರಕರಣ 34 (5) ಮತ್ತು 34 (6)ರಲ್ಲಿ ಮಾಡಲಾದ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ಓದಿಕೊಳ್ಳಬೇಕಾಗುತ್ತದೆ. ಹೀಗೆ ಓದಿಕೊಳ್ಳುತ್ತಾ, ಮಧ್ಯಸ್ಥಿಕೆ ಐತೀರ್ಪನ್ನು ರದ್ದುಗೊಳಿಸಲು ಕೋರಿ ಸಲ್ಲಿಸುವ ಒಂದು ಅರ್ಜಿಗೆ ಮಧ್ಯಸ್ಥಿಕೆದಾರರ ಮುಂದಿರಿಸಿರುವ ದಾಖಲಾತಿಗಳಾಚೆಗೆ ಸಾಮಾನ್ಯವಾಗಿ ಬೇರೆ ಏನೂ ಅಗತ್ಯವಿರುವುದಿಲ್ಲ ಎಂದು ಹೇಳುತ್ತಾ, ನಾವು ಕಾನೂನಿನ ಸ್ಥಾನವನ್ನು ಸ್ಪಷ್ಟಪಡಿಸುತ್ತೇವೆ. ಅಂತಹ ದಾಖಲಾತಿಗಳಲ್ಲಿ ಅಡಕವಾದ ವಿಷಯಗಳು

ಇದ್ದಲ್ಲಿ ಮತ್ತು ಅವು ಪ್ರಕರಣ 34(2)(ಎ) ಅಡಿಯಲ್ಲಿ ಉದ್ಭವಿಸುವ ವಿವಾದಾಂಶ ನಿರ್ಧರಣೆಗೆ ಸಂಗತವಾಗಿದ್ದಲ್ಲಿ ಅವುಗಳನ್ನು ಎರಡು ಪಕ್ಷಕಾರರು ಸಲ್ಲಿಸಿದ ಅಫಿಡವಿಟ್‌ಗಳ ಮೂಲಕ ನ್ಯಾಯಾಲಯದ ಗಮನಕ್ಕೆ ತರಬಹುದಾಗಿದೆ. ಎರಡೂ ಪಕ್ಷಕಾರರೂ ಸಲ್ಲಿಸಿದ ಅಫಿಡವಿಟ್‌ಗಳನ್ನು ಓದಿದಾಗ ಸತ್ಯಾಂಶವು ಗೋಚರಿಸುತ್ತದೆ ಎಂಬ ಕಾರಣಕ್ಕಾಗಿ ಅಫಿಡವಿಟ್‌ಗಳಲ್ಲಿ ಪ್ರಮಾಣೀಕರಿಸಿದ ವ್ಯಕ್ತಿಗಳನ್ನು ಅತೀ ಅಗತ್ಯವಿಲ್ಲದ ಹೊರತು ಪಾಟೀ ಸವಾಲಿಗೆ ಒಳಪಡಿಸುವಂತಿಲ್ಲ. ಆದ್ದರಿಂದ ನಾವು [*ಗಿರ್ಧರ್ ಸೋಂಧಿ ವಿರುದ್ಧ ಎಂಕೆ ಗ್ಲೋಬಲ್ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್* 2017 ಎಸ್‌ಸಿಸಿ ಆನ್‌ಲೈನ್ ಡೆಲ್ 12758] ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯವು ಹೊರಡಿಸಿದ ತೀರ್ಪನ್ನು ತಳ್ಳಿಹಾಕುತ್ತಿದ್ದೇವೆ ಮತ್ತು ದಿನಾಂಕ: 22–9–2016 ರಂದು ಮಾನ್ಯ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು ನೀಡಿದ ತೀರ್ಪನ್ನು ಪುನಸ್ಥಾಪಿಸುತ್ತಿದ್ದೇವೆ. ತತ್‌ಪ್ರಕಾರ ವೆಚ್ಚದ ಆದೇಶವಿಲ್ಲದೇ ಅಪೀಲನ್ನು ಪುರಸ್ಕರಿಸಲಾಗಿದೆ.

(iii) ಮೇಲೆ ಹೇಳಿದ ***ಫಿಜಾ ಡೆವಲಪರ್ಸ್*** ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿದ ನಿರ್ಣಯವು ***ಮೇಲೆ ಹೇಳಿದ ಕೆನರಾ ನಿಧಿ*** ಪ್ರಕರಣದ ತರುವಾಯದ ನಿರ್ಣಯದಲ್ಲಿ ಪುನಃ ಈ ನ್ಯಾಯಾಲಯದ ಪರಿಗಣನೆಗೆ ಒಳಪಟ್ಟಿತು. ***ಮೇಲೆ ಹೇಳಿದ ಎಂಕೆ ಗ್ಲೋಬಲ್*** ಪ್ರಕರಣದಲ್ಲಿನ ಖಂಡಿಕೆ 21ರಲ್ಲಿ ಸೂಚಿಸಿದ ಅಂಶಗಳನ್ನು ಗಮನಿಸಿದ ನಂತರ, ಪ್ರಕರಣ 34ರ ಅಡಿಯಲ್ಲಿನ ಅರ್ಜಿಗೆ, ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಸಲ್ಲಿಸಿರುವ ದಾಖಲಾತಿಗಳ ಆಚೆಗೆ ಸಾಮಾನ್ಯವಾಗಿ ಬೇರೆ ಏನೂ ಅಗತ್ಯವಿರುವುದಿಲ್ಲ ಹಾಗೂ ಅಫಿಡವಿಟ್‌ಗಳಲ್ಲಿ ಪ್ರಮಾಣೀಕರಿಸಿದ ವ್ಯಕ್ತಿಗಳನ್ನು ***ಅತೀ ಅಗತ್ಯವಿರದ ಹೊರತು*** ಪಾಟೀ ಸವಾಲಿಗೆ ಒಳಪಡಿಸುವಂತಿಲ್ಲ ಎಂದು ಕಾನೂನಿನ ಸ್ಥಾನವನ್ನು ಸ್ಪಷ್ಟಪಡಿಸಿದೆ ಎಂಬುದನ್ನು ***ಮೇಲೆ ಹೇಳಿದ ಕೆನರಾ ನಿಧಿ*** ಪ್ರಕರಣದಲ್ಲಿ ಈ ನ್ಯಾಯಾಲಯವು ಗಮನಿಸಿದೆ.

8. ಪ್ರಕರಣ 34(2)(ಎ)ಯ ಪೂರ್ವ–ತಿದ್ದುಪಡಿಯ ವ್ಯಾಪ್ತಿ ಮತ್ತು ಪರಿಧಿಗಳಿಗೆ ಸಂಬಂಧಪಟ್ಟಂತೆ ಮೇಲೆ ಹೇಳಿರುವ ಮೂರು ನಿರ್ಧಾರಗಳ ಕಾರಣಗಳೆಂದರೆ ಕಾಯಿದೆಯ ಪ್ರಕರಣ 34 ರ ಅಡಿಯಲ್ಲಿನ ಅರ್ಜಿಗಳು ಸಂಕ್ಷಿಪ್ತ ವ್ಯವಹರಣೆಗಳಾಗಿವೆ; ಪ್ರಕರಣ 34(2)(ಎ) ಮತ್ತು ಪ್ರಕರಣ 34(2)(ಬಿ) ಗಳಲ್ಲಿ ವಿವರಿಸಿರುವ ಆಧಾರಗಳ ಮೇಲೆ ಮಾತ್ರ ಒಂದು ಐತೀರ್ಪನ್ನು ರದ್ದುಪಡಿಸಬಹುದಾಗಿದೆ; 1996ರ ಕಾಯಿದೆಯನ್ನು ಜಾರಿ ತರುವುದಕ್ಕೆ ಮಧ್ಯಸ್ಥಿಕೆ ವಿವಾದಗಳ ತ್ವರಿತ ಇತ್ಯರ್ಥವೇ ಕಾರಣವಾಗಿದೆ ಮತ್ತು ಮೇಲಿನ ಉದ್ದೇಶವನ್ನು ಬಲಪಡಿಸಲು ಸದರಿ ಕಾಯಿದೆಗೆ ತಿದ್ದುಪಡಿಗಳನ್ನು ಸೇರಿಸುವುದಕ್ಕೆ ಕೂಡ ಕಾರಣವಾಗಿದೆ. ಆದ್ದರಿಂದ, ಮಧ್ಯಸ್ಥಿಕೆ ಕಾಯಿದೆಯ ಪ್ರಕರಣ 34ರ ಅಡಿಯಲ್ಲಿನ ವ್ಯವಹರಣೆಗಳಲ್ಲಿ ವಿವಾದಾಂಶಗಳನ್ನು ರೂಪಿಸುವ ಅಗತ್ಯವಿರುವುದಿಲ್ಲ, ಇಲ್ಲವಾದರೆ ಸಂಕ್ಷಿಪ್ತ ವ್ಯವಹರಣೆಗಳಲ್ಲಿ ವಿವಾದಾಂಶಗಳನ್ನು ರೂಪಿಸಿದ್ದಲ್ಲಿ ಮತ್ತು ಮೌಖಿಕ ಸಾಕ್ಷ್ಯವನ್ನು ದಾಖಲಿಸಿಕೊಂಡಲ್ಲಿ, ಸದರಿ ಉದ್ದೇಶವು ವಿಫಲಗೊಳ್ಳುತ್ತದೆ; ಮಧ್ಯಸ್ಥಿಕೆ ಐತೀರ್ಪನ್ನು ರದ್ದುಗೊಳಿಸಲು ಕೋರಿ ಸಲ್ಲಿಸುವ ಒಂದು ಅರ್ಜಿಗೆ ಮಧ್ಯಸ್ಥಿಕೆದಾರರ ಮುಂದಿರಿಸಿರುವ ದಾಖಲಾತಿಗಳಾಚೆಗೆ ***ಸಾಮಾನ್ಯವಾಗಿ*** ಬೇರೆ ಏನೂ ಅಗತ್ಯವಿರುವುದಿಲ್ಲ, ಅದಾಗ್ಯೂ, ಅಂತಹ ದಾಖಲಾತಿಗಳಲ್ಲಿ ಅಡಕವಾದ ವಿಷಯಗಳು ಇದ್ದಲ್ಲಿ ಮತ್ತು ಅವು ಪ್ರಕರಣ 34(2)(ಎ) ಅಡಿಯಲ್ಲಿ ಉದ್ಭವಿಸುವ ವಿವಾದಾಂಶ ನಿರ್ಧರಣೆಗೆ ಸಂಗತವಾಗಿದ್ದಲ್ಲಿ ಅವುಗಳನ್ನು ಎರಡು ಪಕ್ಷಕಾರರು ಸಲ್ಲಿಸಿದ ಅಫಿಡವಿಟ್‌ಗಳ ಮೂಲಕ ನ್ಯಾಯಾಲಯದ ಗಮನಕ್ಕೆ ತರಬಹುದಾಗಿದೆ. ಎರಡೂ ಪಕ್ಷಕಾರರೂ ಸಲ್ಲಿಸಿದ ಅಫಿಡವಿಟ್‌ಗಳನ್ನು ಓದಿದಾಗ ಸತ್ಯಾಂಶವು ಗೋಚರಿಸುತ್ತದೆ ಎಂಬ ಕಾರಣಕ್ಕಾಗಿ ಅಫಿಡವಿಟ್‌ಗಳಲ್ಲಿ ಪ್ರಮಾಣೀಕರಿಸಿದ ವ್ಯಕ್ತಿಗಳನ್ನು ***ಅತೀ ಅಗತ್ಯವಿಲ್ಲದ ಹೊರತು*** ಪಾಟೀ ಸವಾಲಿಗೆ ಒಳಪಡಿಸುವಂತಿಲ್ಲ. ಆದ್ದರಿಂದ, ಒಂದು ಅಸಾಧಾರಣ ಪ್ರಕರಣವನ್ನು ಸಮರ್ಥಿಸುವ ಸಂದರ್ಭದಲ್ಲಿ ಹಾಗೂ ಒಂದು ವೇಳೆ ಕೆಲವು ಸಂಗತಿಗಳು ಪ್ರಕರಣ 34(2)(ಎ) ಯ ಅಡಿಯಲ್ಲಿ

ಉದ್ಭವಿಸುವ ವಿವಾದಾಂಶಗಳ ನಿರ್ಧರಣೆಗೆ ಸಂಗತವಾಗುತ್ತದೆ ಎಂಬ ಕಾರಣ ನೀಡಿ, ಮಧ್ಯಸ್ಥಿಕೆದಾರರ ಮುಂದಿಟ್ಟ ದಾಖಲಾತಿಗಳನ್ನು ಒಳಗೊಂಡಿರದ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ವಿಚಾರಣೆಗೆ ತಂದಲ್ಲಿ, ಅಂತಹ ಸಂದರ್ಭದಲ್ಲಿ ಪ್ರಕರಣ 34(2)(ಎ) ಯಲ್ಲಿ ವಿವರಿಸಿರುವ ಆಧಾರಗಳ ಮೇಲೆ ಐತೀರ್ಪನ್ನು ಪ್ರಶ್ನಿಸುವ ಪಕ್ಷಕಾರನಿಗೆ ಸಾಕ್ಷ್ಯಾಧಾರಗಳ ರೂಪದಲ್ಲಿ ಅಫಿಡವಿಟ್ಟನ್ನು ಸಲ್ಲಿಸಲು ಅನುಮತಿ ನೀಡಬಹುದಾಗಿದೆ. ಅದಾಗ್ಯೂ, ಅದನ್ನು ***ಅತೀ ಅಗತ್ಯವಿರದ ಹೊರತು*** ಪುರಸ್ಕರಿಸತಕ್ಕದ್ದು.

9. ಮಧ್ಯಸ್ಥಿಕೆ ಕಾಯಿದೆಯ ಪ್ರಕಾರ 34(2)(ಎ)ಯ ಪೂರ್ವತಿದ್ದುಪಡಿಯ ಪ್ರಕಾರ, "ಪುರಾವೆಗಳನ್ನು ಒದಗಿಸುವ" ಅಗತ್ಯತೆಯು ಪ್ರಕರಣ 34(2)(ಬಿ)ಯಲ್ಲಿ ಉಲ್ಲೇಖಿಸಿರುವ ಆಧಾರಗಳ ಮೇಲೆ ಐತೀರ್ಪನ್ನು ರದ್ದುಗೊಳಿಸಲು ಸಲ್ಲಿಸುವ ಅರ್ಜಿಗೆ ಅನ್ವಯವಾಗತಕ್ಕದ್ದಲ್ಲ ಎಂಬ ಅಪೀಲುದಾರರ ಪರವಾಗಿ ಸಲ್ಲಿಸಿದ ವಾದಕ್ಕೆ ಹಾಗೂ ತರುವಾಯದ ಬೆಳವಣಿಗೆಯಾದ ನಿವೇಶನಗಳ ಸಂಯೋಜನೆಗೆ ಅನುಮತಿಯನ್ನು ನೀಡಲು ನಿರಾಕರಿಸಿರುವುದನ್ನು ಜಾರಿ ವ್ಯವಹರಣೆಗಳಲ್ಲಿ ಪರಿಗಣಿಸಬಹುದಾಗಿದೆ ಮತ್ತು ಐತೀರ್ಪು ಜಾರಿಗೊಳಿಸಲು ಯೋಗ್ಯವಲ್ಲ ಎಂಬುದನ್ನು ಜಾರಿ ವ್ಯವಹರಣೆಗಳಲ್ಲಿ ಸೂಚಿಸಲು ಅರ್ಜಿದಾರರಿಗೆ ಮುಕ್ತ ಅವಕಾಶವಿರುತ್ತದೆ ಎಂಬ ವಾದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಆರಂಭದಲ್ಲಿ, ಒಂದು ಪ್ರಕರಣದಲ್ಲಿ, ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂಬುದನ್ನು ಸ್ಥಾಪಿಸುವುದಕ್ಕಾಗಿಯೂ ಕೂಡಾ, ಸಾಕ್ಷ್ಯಾಧಾರವನ್ನು ಒದಗಿಸಬೇಕಾಗಬಹುದು, ಮತ್ತು ಸಾಕ್ಷ್ಯಾಧಾರವನ್ನು ಒದಗಿಸುವ ಮೂಲಕ, ಆ ಆಧಾರದ ಮೇಲೆ ಐತೀರ್ಪನ್ನು ಪ್ರಶ್ನಿಸುತ್ತಿರುವ ವ್ಯಕ್ತಿಯು ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ

ಎಂದೂ, ಮತ್ತು/ಅಥವಾ ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಅಡಿಯಲ್ಲಿ ವಿವಾದದ ವಸ್ತು ವಿಷಯವು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸಲು ಯೋಗ್ಯವಾಗಿಲ್ಲ ಎಂಬುದನ್ನು ಸ್ಥಾಪಿಸಿ, ಸಾಬೀತುಪಡಿಸಬಹುದಾಗಿದೆ ಎಂಬ ಅಂಶವನ್ನು ಗಮನಿಸುವುದು ಅಗತ್ಯವಾಗಿದೆ. ಅದಾಗ್ಯೂ, ಇದೇ ಸಂದರ್ಭದಲ್ಲಿ, ಒಂದು ವೇಳೆ ಮಧ್ಯಸ್ಥಿಕೆದಾರರ ಮುಂದಿರಿಸಿರುವ ದಾಖಲಾತಿಗಳ ಮೂಲಕ, ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಅಡಿಯಲ್ಲಿ ವಿವಾದದ ವಸ್ತು–ವಿಷಯವು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸಲು ಯೋಗ್ಯವಾಗಿಲ್ಲ ಎಂಬ ಅಂಶವನ್ನು ಅಥವಾ ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂಬ ಅಂಶವನ್ನು ಸ್ಥಾಪಿಸಿ, ಸಾಬೀತುಪಡಿಸಬಹುದಾಗಿದ್ದರೆ, ಅಂತಹ ಸಂದರ್ಭದಲ್ಲಿ ಆ ವ್ಯಕ್ತಿಗೆ ಸಾಕ್ಷ್ಯಗಳ/ಹೆಚ್ಚುವರಿ ಸಾಕ್ಷ್ಯಗಳ ರೂಪದಲ್ಲಿ ಅಫಿಡವಿಟ್ಟನ್ನು ಸಲ್ಲಿಸಲು ಅನುಮತಿ ನೀಡಲಾಗದು.

10. ತರುವಾಯದ ಬೆಳವಣಿಯಾಗಿರುವ ನಿವೇಶನಗಳ ಸಂಯೋಜನೆಗೆ ಸೂಕ್ತ ಪ್ರಾಧಿಕಾರವು ಅನುಮತಿಯನ್ನು ನೀಡಲು ನಿರಾಕರಿಸಿರುವುದು ಜಾರಿ ವ್ಯವಹರಣೆಗಳಲ್ಲಿ ಪರಿಗಣಿಸಬಹುದಾಗಿದೆ, ಹಾಗೂ ಯಾವ ವ್ಯಕ್ತಿಯ ವಿರುದ್ಧ ಐತೀರ್ಪನ್ನು ಹೊರಡಿಸಲಾಗಿದೆಯೋ ಮತ್ತು ಅಮಲ್ಜಾರಿ ನ್ಯಾಯಾಲಯದ ಮುಂದೆ ಪ್ರಕರಣ 34(2)(ಬಿ)ಯಲ್ಲಿ ಉಲ್ಲೇಖಿಸಿದ ಆಧಾರದ ಮೇಲೆ ಆ ವ್ಯಕ್ತಿಯು ಆಕ್ಷೇಪಣೆಯನ್ನು ಎತ್ತಿದ ಸಂದರ್ಭದಲ್ಲಿ, ಅಮಲ್ಜಾರಿ ನ್ಯಾಯಾಲಯವು ಐತೀರ್ಪು ಜಾರಿಗೆ ಯೋಗ್ಯವಲ್ಲ ಎಂದು ತೀರ್ಪು ನೀಡಬಹುದಾಗಿದೆ ಎನ್ನುವ ಅಪೀಲುದಾರರ ಪರ ಸಲ್ಲಿಸಿರುವ ವಾದಕ್ಕೆ ಸಂಬಂಧ ಪಡುವಷ್ಟರ ಮಟ್ಟಿಗೆ, ಪ್ರಕರಣ 34(2)(ಬಿ)ಯಲ್ಲಿ ಉಲ್ಲೇಖಿಸಿರುವ ಆಧಾರಗಳಲ್ಲಿ ಒಂದಾಗಿರುವ ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂಬ ಆಧಾರಕ್ಕೆ ಸಂಬಂಧಪಟ್ಟಂತೆ, ಸದರಿ ಆಧಾರವನ್ನು ಐತೀರ್ಪನ್ನು ಹೊರಡಿಸಿದ

ನಂತರ ಮಾತ್ರವಷ್ಟೇ ಲಭ್ಯಗೊಳಿಸಿಕೊಳ್ಳಬಹುದಾಗಿದೆ ಎಂಬ ಅಂಶವನ್ನು ಇಲ್ಲಿ ಗಮನಿಸುವುದು ಅವಶ್ಯಕವಾಗಿದೆ. ಆದ್ದರಿಂದ, ಕಾಯಿದೆಯ 34ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸುವ ಅರ್ಜಿಯಲ್ಲಿ ಅದನ್ನು ವಾದಿಸಲು ಅನುಮತಿ ನೀಡಬಹುದಾಗಿದೆ ಮತ್ತು ಜಾರಿ ಸಲ್ಲಿಸುವಿಕೆಯವರೆಗೆ ಆ ವ್ಯಕ್ತಿಯು ಕಾಯುವ ಅವಶ್ಯಕತೆ ಇರತಕ್ಕದ್ದಲ್ಲ. ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ ಎಂಬ ಪ್ರತಿವಾದವೇ ಕಾಯಿದೆಯ ಪ್ರಕರಣ 34(2)(ಬಿ) ಯ ಹಿನ್ನೆಲೆಯಲ್ಲಿ ಐತೀರ್ಪನ್ನು ರದ್ದುಗೊಳಿಸಲು ಒಂದು ಆಧಾರವಾಗಬಹುದಾಗಿದೆ. ಆದ್ದರಿಂದ, ಮೇಲೆ ಮಂಡಿಸಲಾಗಿರುವ ವಾದಗಳಲ್ಲಿ ಯಾವುದೇ ಹುರುಳಿಲ್ಲ.

11. ಈಗ ಪರಿಗಣನೆಗೆ ಬಂದಿರುವ ಮುಂದಿನ ಪ್ರಶ್ನೆಯೆಂದರೆ, ಪ್ರಸ್ತುತ ಪ್ರಕರಣವು ಪ್ರತಿವಾದಿಗಳಿಗೆ ಅಫಿಡವಿಟ್ ಸಲ್ಲಿಸಲು ಮತ್ತು ಸಾಕ್ಷ್ಯಾಧಾರಗಳನ್ನು ಒದಗಿಸಲು ಅವಕಾಶ ನೀಡುವಷ್ಟು ಅಸಾಧಾರಣವಾಗಿದೆಯೇ? ಮತ್ತು ಅದಕ್ಕಾಗಿ ಯಾವುದಾದರೂ ಪ್ರಕರಣವನ್ನು ಸಮರ್ಥಿಸಲಾಗಿದೆಯೇ?

ಕಾಯಿದೆಯ ಪ್ರಕರಣ 34ರ ಅಡಿಯಲ್ಲಿನ ವ್ಯವಹರಣೆಗಳಲ್ಲಿ ಸಲ್ಲಿಸಲು ಕೋರಿರುವ ಅಫಿಡವಿಟ್‌ನಿಂದ, ಪ್ರತಿವಾದಿಗಳು ನಿವೇಶನಗಳ ಸಂಯೋಜನೆಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುವ ಸೂಕ್ತ ಪ್ರಾಧಿಕಾರದ ಸಂವಹನವನ್ನು ದಾಖಲಿಸಲು ಬಯಸುತ್ತಾರೆ ಎಂದು ಕಂಡುಬಂದಿದೆ. ಈ ಹಂತದಲ್ಲಿ ಮಧ್ಯಸ್ಥಿಕೆ ನ್ಯಾಯಾಧಿಕರಣವು ನಿವೇಶನ ಸಂಯೋಜನೆಯ ಷರತ್ತಿಗೆ ಒಳಪಡಿಸಿ ಗುತ್ತಿಗೆ/ಒಪ್ಪಂದದ ನಿರ್ದಿಷ್ಟ ಕಾರ್ಯನಿರ್ವಹಣೆಗಾಗಿ ಡಿಕ್ರಿಯನ್ನು ಹೊರಡಿಸಿದೆ ಎಂಬುದನ್ನು ಗಮನಿಸುವ ಅಗತ್ಯವಿದೆ. ಆದ್ದರಿಂದ, ಪ್ರತಿವಾದಿಗಳ ಪರವಾಗಿ ಸಲ್ಲಿಸಿರುವ ವಾದವೆಂದರೆ ನಿವೇಶನಗಳನ್ನು ಸಂಯೋಜಿಸಲು ಸೂಕ್ತ ಪ್ರಾಧಿಕಾರದಿಂದ ಅನುಮತಿ ನಿರಾಕರಿಸಿರುವ

ಹಿನ್ನೆಲೆಯಲ್ಲಿ ಪ್ರಕರಣವು ಪ್ರಕರಣ 34(2)(ಬಿ)ಯ ಅಡಿಯಲ್ಲಿ ಬರುತ್ತದೆ. ಅಂದರೆ, ವಿವಾದವು ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಅಡಿಯಲ್ಲಿ ಇತ್ಯರ್ಥಕ್ಕೆ ಯೋಗ್ಯವಾಗಿಲ್ಲ ಮತ್ತು ಮಧ್ಯಸ್ಥಿಕೆ ಐತೀರ್ಪು ಭಾರತದ ಸಾರ್ವಜನಿಕ ನೀತಿಯೊಂದಿಗೆ ಸಂಘರ್ಷಕ್ಕೆ ಒಳಪಟ್ಟಿದೆ. ಅಂದರೆ, ಸಂಗತವಾಗಿರುವ ಭೂ ಕಾನೂನುಗಳಿಗೆ ವಿರುದ್ಧವಾಗಿದೆ. ನಿವೇಶನಗಳನ್ನು ಸಂಯೋಜನೆಗೊಳಿಸಲು ನಿರಾಕರಿಸಿರುವ ಪ್ರಕ್ರಿಯೆಯು ಐತೀರ್ಪು ಹೊರಡಿಸಿದ ತರುವಾಯದ ಬೆಳವಣಿಗೆಯಾಗಿದ್ದು ಆದ್ದರಿಂದಾಗಿ ಸ್ವಾಭಾವಿಕವಾಗಿ ಅದು ಮಧ್ಯಸ್ಥಿಕೆ ನ್ಯಾಯಾಧಿಕರಣದ ದಾಖಲಾತಿಯನ್ನು ರೂಪಿಸುವ ಭಾಗವಾಗತಕ್ಕದ್ದಲ್ಲ. ಅದಲ್ಲದೆಯೂ, ಮಧ್ಯಸ್ಥಿಕೆ ನ್ಯಾಯಾಧಿಕರಣದ ಐತೀರ್ಪು ಒಂದು ಏಕಪಕ್ಷೀಯ ಐತೀರ್ಪಾಗಿತ್ತು ಮತ್ತು ಪ್ರತಿವಾದಿಗಳ ಪರವಾಗಿ ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದೆ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ ಎಂಬುದನ್ನು ಗಮನಿಸುವುದು ಅಗತ್ಯವಾಗಿದೆ. ಮಧ್ಯಸ್ಥಿಕೆ ನ್ಯಾಯಾಧಿಕರಣವು ಮುಂದಿನ ವ್ಯವಹರಣೆಗಳನ್ನು ಏಕಪಕ್ಷೀಯವಾಗಿ ನಡೆಸಲು ಮುಂದುವರೆದಿರುವುದು ಸಮರ್ಥನೀಯವಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನಾವು ಅಭಿಪ್ರಾಯ ನೀಡುತ್ತಿಲ್ಲ. ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದೆ ಅಂತಹ ಸಾಕ್ಷ್ಯಾಧಾರಗಳು ಇರಲಿಲ್ಲ ಮತ್ತು ನಿವೇಶನಗಳ ಸಂಯೋಜನೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳಿರಲಿಲ್ಲ ಎಂಬುದನ್ನು ದಾಖಲಿಸಿಕೊಂಡರೆ ಸಾಕಾಗುತ್ತದೆ.

ಆದ ಕಾರಣ ಈ ಅಫಿಡವಿಟ್ ನಿರ್ದಿಷ್ಟ ದಸ್ತಾವೇಜನ್ನು ಮತ್ತು ಹಾಜರುಪಡಿಸಲು ಅಗತ್ಯವಿರುವ ಸಾಕ್ಷ್ಯಾಧಾರವನ್ನು ಬಹಿರಂಗಪಡಿಸುತ್ತದೆ. ಈ ವಿಷಯದ ಹಿನ್ನೆಲೆಯಲ್ಲಿ ಪ್ರತಿವಾದಿಗಳು ಅಫಿಡವಿಟ್ ಸಲ್ಲಿಸಲು/ಹೆಚ್ಚುವರಿ ಸಾಕ್ಷ್ಯಾಧಾರಗಳನ್ನು ಒದಗಿಸಲು ಅನುಮತಿ ಪಡೆಯಲು ಬಲವಾದ ಅಸಾಧಾರಣವಾದ ಪ್ರಕರಣವನ್ನು ಸಮರ್ಥಿಸಿರುತ್ತಾರೆ. ಅದಾಗ್ಯೂ, ಅದೇ ಸಮಯದಲ್ಲಿ,

ಅಪೀಲುದಾರನಿಗೆ ಪಾಟೀ ಸವಾಲು ನಡೆಸಲು ಮತ್ತು/ಅಥವಾ ವ್ಯತಿರಿಕ್ತ ಸಾಕ್ಷ್ಯಗಳನ್ನು ಸಲ್ಲಿಸಲು ಅನುಮತಿ ನೀಡಬಹುದಾಗಿದೆ.

12. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಮೇಲೆ ತಿಳಿಸಿದ ಕಾರಣಗಳಿಂದಾಗಿ, ಮಧ್ಯಸ್ಥಿಕೆ ಕಾಯಿದೆಯ ಪ್ರಕರಣ 34ರ ಅಡಿಯಲ್ಲಿನ ವ್ಯವಹರಣೆಗಳಲ್ಲಿ ಪ್ರತಿವಾದಿಗಳಿಗೆ ಅಫಿಡವಿಟ್/ ಹೆಚ್ಚುವರಿ ಸಾಕ್ಷ್ಯವನ್ನು ಸಲ್ಲಿಸಲು ಅನುಮತಿ ನೀಡುವಲ್ಲಿ ಉಚ್ಚ ನ್ಯಾಯಾಲಯವು ಯಾವುದೇ ಪ್ರಮಾದವನ್ನು ಎಸಗಿಲ್ಲ ಎಂದು ನಾವು ಅಭಿಪ್ರಾಯ ಪಡುತ್ತೇವೆ.

13. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಮೇಲೆ ತಿಳಿಸಿರುವ ಕಾರಣಗಳಿಂದಾಗಿ, ಪ್ರಸ್ತುತ ಅಪೀಲು ವಿಫಲಗೊಳ್ಳುತ್ತದೆ ಮತ್ತು ಅದು ವಜಾಗೊಳಿಸಲು ಅರ್ಹವಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಅದನ್ನು ವಜಾಗೊಳಿಸಲಾಗಿದೆ. ಅದಾಗ್ಯೂ, ಇಲ್ಲಿನ ಅಪೀಲುದಾರನಿಗೆ ನಾಲೆಗಳು ಇರುವ ಖಾತಾಗಳನ್ನು ಒಗ್ಗೂಡಿಸಲು ಅನುಮತಿ ಸೇರಿದಂತೆ ಪಾಟೀ ಸವಾಲಿಗೆ ಒಳಪಡಿಸಲು ಮತ್ತು/ಅಥವಾ ವಿರುದ್ಧವಾದ ಸಾಕ್ಷ್ಯವನ್ನು ಒದಗಿಸಲು ಅನುಮತಿ ನೀಡಬಹುದು ಎಂದು ಗಮನಿಸಲಾಗಿದೆ, ಏಕೆಂದರೆ ದಿನಾಂಕ 28-06-2004ರ ಅನುಮೋದನೆಯಲ್ಲಿ ಕಂಡ ನಿಗಮವು ಖಾತಾಗಳನ್ನು ಒಗ್ಗೂಡಿಸುವುದನ್ನು ಪರಿಗಣಿಸಲು ಒಪ್ಪಿಗೆ ನೀಡಿದೆ ಎಂಬುದು ಅಪೀಲುದಾರನ ವಾದವಾಗಿದೆ. ಅಂತಹ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದಾಗ/ಒದಗಿಸಿದಾಗ, ಸಂಬಂಧಿತ ನ್ಯಾಯಾಲಯವು ಕಾನೂನಿನ ಪ್ರಕಾರ ಮತ್ತು ತನ್ನ ಸ್ವಂತ ಅರ್ಹತೆಗಳ ಆಧಾರದ ಮೇಲೆ ವ್ಯವಹರಿಸಬಹುದು. ಅದಾಗ್ಯೂ, ಅದೇ ಸಮಯದಲ್ಲಿ ಪ್ರಕರಣ 34ರ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿರುವ ನ್ಯಾಯಾಲಯವು ಮಧ್ಯಸ್ಥಿಕೆ ಕಾಯಿದೆಯ ಆಶಯ ಮತ್ತು ಉದ್ದೇಶವಾಗಿರುವ ತ್ವರಿತ

ವಿಲೆಯನ್ನು ಪರಿಗಣಿಸಿ ಪ್ರಕರಣ 34ರ ಅರ್ಜಿಯಲ್ಲಿ ತ್ವರಿತವಾಗಿ ಅಂತಿಮ ನಿರ್ಣಯ ಹಾಗೂ ವಿಲೆಯನ್ನು ಕೈಗೊಳ್ಳತಕ್ಕದ್ದು.

14. ಈ ವೀಕ್ಷಣೆಗಳೊಂದಿಗೆ, ಪ್ರಸ್ತುತ ಅಪೀಲನ್ನು ವಜಾಗೊಳಿಸಲಾಗಿದೆ. ವೆಚ್ಚದ ಆದೇಶ ಏನೂ ಇಲ್ಲ.

..........................................ನ್ಯಾ.
[ಎಂ.ಆರ್. ಶಾಹ್]

..........................................ನ್ಯಾ.
[ಸಿ.ಟಿ. ರವಿಕುಮಾರ್]

ನವದೆಹಲಿ
ಜನವರಿ 19, 2023

## <u>ಕ್ಲೇಮು ನಿರಾಕರಣೆ</u>

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."